# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:03.10.2024

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

॥ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ॥

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/479/2024–25/2450 ದಿನಾಂಕ:09.10.2024

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:03.10.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:03.10.2024 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

<u>ಪ್ರತಿಗಳು:</u>

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:03.10.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಡಾ. ಮಹಾಬಲೇಶ್ವರ ಯು.ಎಸ್ ಡೀನರು, ವಿಜ್ಞಾನ ನಿಕಾಯ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಉಮೇಶ್ ಬಿ. ಎನ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಡಾ. ನಾಗರಾಜ ಎಸ್. ಹೆಚ್, ಪ್ರಾಚಾರ್ಯರು : ಸದಸ್ಯರು
6. ಡಾ. ಲಿಂಗರಾಜ ಪೂಜಾರ್, ಪ್ರಾಚಾರ್ಯರು : ಸದಸ್ಯರು
7. ಡಾ. ದಿವಾಕರ್ ನಾಯ್ಕ ಕೆ. ಎಸ್, ಪ್ರಾಚಾರ್ಯರು : ಸದಸ್ಯರು
8. ಶ್ರೀಮತಿ ಜಯಲಕ್ಷ್ಮಿ ಎಂ. ಆರ್, ಪ್ರಾಚಾರ್ಯರು : ಸದಸ್ಯರು
9. ಡಾ. ಗೋವಿಂದಪ್ಪ ಎಂ, ಪ್ರಾಧ್ಯಾಪಕರು : ಸದಸ್ಯರು
10. ಡಾ. ರಮೇಶ್ ಸಿ. ಕೆ, ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
11. ಡಾ. ಶಶಿಧರ್ ಆರ್, ಕುಲಸಚಿವರು, ಆಡಳಿತ (ಪ್ರಭಾರೆ) ಹಾಗೂ ಡೀನರು, ವಾಣಿಜ್ಯ ನಿಕಾಯ : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 11 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(10/24) |

## –:ಟಿಪ್ಪಣಿ:–

**ವಿಷಯ: ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ದಿನಾಂಕ:17.08.2024 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:03.10.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(10/24) |

## –: ಟಿಪ್ಪಣಿ :–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ **Innovation and Start-up Incubation Centre (DUISIC)** ಪ್ರಾರಂಭಿಸುವ ಕುರಿತಾದ **Regulations** ನ್ನು ಅನುಮೋದಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ Regulations ನ್ನು ಸಿದ್ಧಪಡಿಸಲಾಗಿದ್ದು, ಸದರಿ Regulations ಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿ ಅನುಮೋದನೆ ಪಡೆಯಲು **ದಿನಾಂಕ:27.09.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ Regulations ಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ Regulations ಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(c)/(10/24) |

# –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ವಿವಿಧ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಸಂಬಂಧಿಸಿದ ಕರಡು ಪರಿನಿಯಮಗಳನ್ನು ಅನುಮೋದಿಸುವ ಬಗ್ಗೆ.**

*********

ವಿಶ್ವವಿದ್ಯಾನಿಲಯವು ದಿನಾಂಕ:18.08.2009ರಂದು ಪ್ರಾರಂಭವಾದ ನಂತರ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳ/ ಸಂಶೋಧಕರ ಮತ್ತು ಉನ್ನತ ಶಿಕ್ಷಣಾಸಕ್ತರ ಹಿತಾಸಕ್ತಿಯನ್ನು ಪರಿಗಣಿಸಿಕೊಂಡು, ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ವಿಶ್ವವಿದ್ಯಾನಿಲಯದ ಮುಖ್ಯಕೇಂದ್ರ, ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಚಿತ್ರದುರ್ಗ ಮತ್ತು ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ (ಘಟಕ ಕಾಲೇಜು), ದಾವಣಗೆರೆ – ಇಲ್ಲಿ ಅಗತ್ಯವಿದ್ದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ಕೋರ್ಸುಗಳಿಗೆ ಗೌರವಾನ್ವಿತ ರಾಜ್ಯಪಾಲರ ಮತ್ತು ಕುಲಾಧಿಪತಿಗಳ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ – ವಿವಿಧ ವಿಭಾಗಗಳ ಕರಡು ಪರಿನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ವಿವರಗಳು | ವಿಭಾಗಗಳನ್ನು ಪ್ರಾರಂಭಿಸಲಾಗಿರುವ ಶೈಕ್ಷಣಿಕ ವರ್ಷ |
|---|---|---|
| **I** | **ವಿಶ್ವವಿದ್ಯಾನಿಲಯ ಮುಖ್ಯಕೇಂದ್ರ, ಶಿವಗಂಗೋತ್ರಿ, ದಾವಣಗೆರೆ.** | |
| 1 | ದೈಹಿಕ ಶಿಕ್ಷಣ ಅಧ್ಯಯನ ವಿಭಾಗ | 2017–18 |
| 2 | ಕ್ರಿಮಿನಾಲಜಿ ಮತ್ತು ಫಾರೆನ್ಸಿಕ್ ಸೈನ್ಸ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2017–18 |
| 3 | ಯೋಗ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2018–19 |
| 4 | ಉರ್ದು ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2021–22 |
| 5 | ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2021–22 |
| 6 | ಎಂ.ಸಿ.ಎ. ಅಧ್ಯಯನ ವಿಭಾಗ | 2022–23 |
| | | |
| **II** | **ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ.** | |
| 1 | ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2019–20 |
| 2 | ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2019–20 |
| 3 | ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2020–21 |
| | | |
| **III** | **ವಿಶ್ವವಿದ್ಯಾನಿಲಯ ಘಟಕ ಕಾಲೇಜು, ದಾವಣಗೆರೆ.** | |
| 1 | ಅಪ್ಲೈಡ್ ಆರ್ಟ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2010–11 |
| 2 | ಪೇಂಟಿಂಗ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 2010–11 |

**ಪು.ತಿ.ನೋ.**

ಕುಲಸಚಿವರು

ಕುಲಪತಿಗಳು

ಮೇಲ್ಕಂಡ ವಿವಿಧ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಈಗಾಗಲೇ ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಯುಜಿಸಿ 7ನೇ ವೇತನ ನಿಯಮಗಳು, ಉಪನಿಯಮ 19.1ಗಳನ್ವಯ ಪ್ರತಿ ಅಧ್ಯಯನ ವಿಭಾಗಕ್ಕೆ ಪ್ರಾಧ್ಯಾಪಕ-01; ಸಹ ಪ್ರಾಧ್ಯಾಪಕರು-02; ಸಹಾಯಕ ಪ್ರಾಧ್ಯಾಪಕರು-04ರಂತೆ ಒಟ್ಟು 07 ಬೋಧಕ ಹುದ್ದೆಗಳು ಮತ್ತು ಸಂಬಂಧಪಟ್ಟ ವಿಭಾಗಗಳ ಕಾರ್ಯಾಲಯಗಳಲ್ಲಿನ ದೈನಂದಿನ ಆಡಳಿತಾತ್ಮಕ ಕಾರ್ಯನಿರ್ವಹಣೆಗೆ ಅವಶ್ಯವಿರುವ ಬೋಧಕೇತರ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಸಂಬಂಧ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದು, ದಿನಾಂಕ:27.09.2024ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ತತ್ಸಂಬಂಧದ ಸದರಿ ಕರಡು ಪರಿನಿಯಮಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈ ಮೇಲ್ಕಂಡ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಸ್ಥಾಪನೆಗೆ ಸಂಬಂಧಿಸಿದ ಕರಡು ಪರಿನಿಯಮ (Statutes)ಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(d)/(10/24) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯ (ಘಟಕ ಕಾಲೇಜು) ದಾವಣಗೆರೆ – ಇಲ್ಲಿ ಹೊಸದಾಗಿ ಬೇಡಿಕೆ ಇರುವ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಪ್ರಾರಂಭಿಸುವ ಸಂಬಂಧದ ಕರಡು ಪರಿನಿಯಮಗಳನ್ನು ಅನುಮೋದಿಸುವ ಕುರಿತು.

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ವಿದ್ಯಾರ್ಥಿಗಳ/ಸಂಶೋಧಕರ ಮತ್ತು ಉನ್ನತ ಶಿಕ್ಷಣಾಸಕ್ತರ ಮನವಿಗಳನ್ನು ಪರಿಗಣಿಸಿಕೊಂಡು ಈ ಕೆಳಕಂಡ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯ, (ಘಟಕ ಕಾಲೇಜು), ದಾವಣಗೆರೆ – ಇಲ್ಲಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

| ಕ್ರ.ಸಂ. | ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ವಿವರಗಳು |
|---|---|
| I | ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ. |
| 1 | ಗಣಕ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 2 | ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 3 | ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 4 | ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| | |
| II | ವಿಶ್ವವಿದ್ಯಾನಿಲಯ ಘಟಕ ಕಾಲೇಜು, ದಾವಣಗೆರೆ. |
| 1 | ಫ್ಯಾಷನ್ ಡಿಸೈನ್ & ಟೆಕ್ನಾಲಜಿ |
| 2 | ಮ್ಯೂಸಿಕ್ ಅಂಡ್ ಪರ್ಫಾರ್ಮಿಂಗ್ ಆರ್ಟ್ |

ಮೇಲ್ಕಂಡ ವಿವಿಧ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಪ್ರಾರಂಭಿಸುವ ಸಂಬಂಧ ಯುಜಿಸಿ 7ನೇ ವೇತನ ನಿಯಮಗಳು, ಉಪನಿಯಮ 19.1 ಗಳನ್ವಯ – ಪ್ರಾಧ್ಯಾಪಕರು–01; ಸಹ ಪ್ರಾಧ್ಯಾಪಕರು–02; ಸಹಾಯಕ ಪ್ರಾಧ್ಯಾಪಕರು–4 ರಂತೆ ಒಟ್ಟು 07 ಬೋಧಕ ಹುದ್ದೆಗಳನ್ನು ಮತ್ತು ಸಂಬಂಧಪಟ್ಟ ವಿಭಾಗಗಳ ಕಾರ್ಯಾಲಯಗಳಲ್ಲಿನ ದೈನಂದಿನ ಆಡಳಿತಾತ್ಮಕ ಕಾರ್ಯನಿರ್ವಹಣೆಗೆ ಅವಶ್ಯವಿರುವ ಬೋಧಕೇತರ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಸಂಬಂಧ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದು, ತತ್ಸಂಬಂಧದ ಕರಡು ಪರಿನಿಯಮಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈ ಮೇಲ್ಕಂಡ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಸ್ಥಾಪನೆಗೆ ಸಂಬಂಧಿಸಿದ ಕರಡು ಪರಿನಿಯಮ(Statutes)ಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ಸಿಂ.02(a)/(10/24) |

## —: ಟಿಪ್ಪಣಿ :—

**ವಿಷಯ: ಸ್ನಾತಕೋತ್ತರ ಕಲಾ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ **ಸ್ನಾತಕೋತ್ತರ ಕಲಾ ನಿಕಾಯದ** ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ಕಲಾ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ಕಲಾ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ಸಿಂ.02(b)/(10/24) |

# –: ಟಿಪ್ಪಣಿ :–

**ವಿಷಯ: ಸ್ನಾತಕೋತ್ತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ **ಸ್ನಾತಕೋತ್ತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ** ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ಸಿಂ.02(c)/(10/24) |

## –: ಟಿಪ್ಪಣಿ :–

**ವಿಷಯಃ ಸ್ನಾತಕೋತ್ತರ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ **ಸ್ನಾತಕೋತ್ತರ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ** ನಿಕಾಯದ ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ಸಿಂ.02(d)/(10/24) |

## -ಃ ಟಿಪ್ಪಣಿ ಃ-

**ವಿಷಯಃ ಸ್ನಾತಕೋತ್ತರ ಶಿಕ್ಷಣ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ **ಸ್ನಾತಕೋತ್ತರ ಶಿಕ್ಷಣ ನಿಕಾಯದ** ಎಲ್ಲಾ ಪದವಿ ಪತ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ಶಿಕ್ಷಣ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪತ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ಶಿಕ್ಷಣ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ(BOS) | |
|---|---|
| ವಿಷಯ ಸಂಖ್ಯೆ: | ಸಿಂ.02(e)/(10/24) |

## -: ಟಿಪ್ಪಣಿ :-

**ವಿಷಯ: ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನದ ವಿಭಾಗದ ವಿದ್ಯಾರ್ಥಿಗಳಿಗೆ MA/ M.Sc. ಪದವಿ ಬದಲಿಗೆ M.Sc ಪದವಿ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆಯಲ್ಲಿ ಆಗಸ್ಟ್-2018 ರಿಂದ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ(Criminology and forensic Science) MA/ M.Sc. ಪದವಿಯನ್ನು ಪ್ರಾರಂಭಿಸಲಾಗಿದ್ದು, ಸದರಿ ವಿಭಾಗದ ವಿದ್ಯಾರ್ಥಿಗಳಿಗೆ 2018-19ನೇ ಶೈಕ್ಷಣಿಕ ಸಾಲಿನಿಂದ ಸೆಪ್ಟಂಬರ್/ಅಕ್ಟೋಬರ್-2023ರ ವರೆಗಿನ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ MA/M.Sc. ಎಂಬ ಶೀರ್ಷಿಕೆಯಡಿಯಲ್ಲಿ ಅಂಕಪಟ್ಟಿಗಳನ್ನು ವಿತರಿಸಲಾಗಿದೆ. ಆದರೆ, 2023-24 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಉದ್ಯೋಗ ಪಡೆಯುವ ಹಿತದೃಷ್ಟಿಯಿಂದ MA/M.Sc. ಶೀರ್ಷಿಕೆ ಬದಲಾಗಿ M.Sc. ಶೀರ್ಷಿಕೆಯಲ್ಲಿ ಅಂಕಪಟ್ಟಿಗಳನ್ನು ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ದಿನಾಂಕ:04.09.2024 ರಂದು ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ (Criminology and forensic Science) ಅಧ್ಯಯನ ಮಂಡಳಿ ಸಭೆಯನ್ನು ಏರ್ಪಡಿಸಿ, ಸಭೆಯಲ್ಲಿ **2024-25ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ MA/M.Sc. ಶೀರ್ಷಿಕೆ ಬದಲಾಗಿ M.Sc in Criminology and forensic Science ಶೀರ್ಷಿಕೆಯಲ್ಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ನೀಡುವಂತೆ ನಿರ್ಣಯಿಸಿ,** 01 ರಿಂದ 04ನೇ ಸೆಮಿಸ್ಟರ್‌ನ ಪಠ್ಯಕ್ರಮ ಹಾಗೂ ನಿಯಮಾವಳಿ (Regulations) ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಮುಂದುವರೆದು, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ವಿಷಯಕ್ಕೆ M.Sc. ಶೀರ್ಷಿಕೆ ನೀಡುವುದರಿಂದ, ಸದರಿ ವಿಷಯವು ಕಲಾ ನಿಕಾಯದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಕ್ಕೆ ಬದಲಾವಣೆಯಾಗಿರುತ್ತದೆ.

ಆದ್ದರಿಂದ, ಸದರಿ ವಿಷಯವನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಪದವಿಯನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಸದರಿ ವಿಷಯವು ಕಲಾ ನಿಕಾಯದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಕ್ಕೆ ಬದಲಾವಣೆಯಾಗಿರುವ ಕುರಿತು ಪರಿಶೀಲಿಸಲಾಯಿತು ಮತ್ತು 2024-25ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ M.Sc. (Master of Science) ಎಂಬ ಶೀರ್ಷಿಕೆಯಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡಲು ಸಭೆ ನಿರ್ಣಯಿಸಿತು. ಮುಂದುವರೆದು, ಸದರಿ ವಿಭಾಗಕ್ಕೆ BoS ನಿರ್ಣಯದ ಪ್ರಕಾರ ಅಂದಾಜು ರೂ.10.00 ಲಕ್ಷದಲ್ಲಿ ಪ್ರಯೋಗಾಲಯವನ್ನು ನಿರ್ಮಿಸಿಕೊಡಲು ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಶೈಕ್ಷಣಿಕ ವರ್ಷ 2023-24ನೇ ಸಾಲಿನ 4ನೇ ಸೆಮಿಸ್ಟರ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿಯಲ್ಲಿ ಬಿ.ಎ. ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಎಂ.ಎ ಎಂದು ಹಾಗೂ ಬಿ.ಎಸ್ಸಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಎಂ.ಎಸ್ಸಿ. ಎಂಬ ಶೀರ್ಷಿಕೆಯಡಿಯಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BOS) | |
| --- | --- |
| ವಿಷಯ ಸಂಖ್ಯೆ: | ಸಿಂ.02(f)/(10/24) |

## -: ಟಿಪ್ಪಣಿ :-

**ವಿಷಯ: ರಾಜ್ಯ ಶಿಕ್ಷಣ ನೀತಿ (SEP) ಸ್ನಾತಕ ಪದವಿಯ 1 ರಿಂದ 4ನೇ ಸೆಮಿಸ್ಟರ್‌ವರೆಗಿನ ಪ್ರಮುಖ ಪತ್ರಿಕೆಗಳ (ಕಲಾ ನಿಕಾಯ) ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸುವ ಕುರಿತು.**

*********

2024-25ನೇ ಶೈಕ್ಷಣಿಕ ಸಾಲಿನ ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನುಸಾರ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಸ್ನಾತಕ ಪದವಿಯ ಪಠ್ಯಕ್ರಮಗಳ ಕುರಿತು ಅಧ್ಯಯನ ಮಂಡಳಿಗಳಲ್ಲಿ ಚರ್ಚಿಸಿ 1 & 2ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ದಪಡಿಸಿ ಅಧ್ಯಯನ ಮಂಡಳಿಯಲ್ಲಿ ಅನುಮೋದಿಸಿರುತ್ತಾರೆ. ದಿನಾಂಕ21.06.2024 ರ ಕಲಾ ನಿಕಾಯದಲ್ಲಿ ಸದರಿ ಪಠ್ಯಕ್ರಮಗಳನ್ನು ಅನುಮೋದಿಸಲಾಗಿದೆ. ಮುಂದುವರಿದು, ದಿನಾಂಕ:09.07.2024ರ ವಿದ್ಯಾವಿಷಯಕ ಪರಿಷತ್ತ ಸಭೆಯಲ್ಲಿ ಪಠ್ಯಕ್ರಮ ಹಾಗೂ ನಡಾವಳಿಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಸ್ನಾತಕ ಪದವಿಯ ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನುಸಾರ ಕಲಾ ನಿಕಾಯದ ಪಠ್ಯಕ್ರಮಗಳನ್ನು ರಚಿಸಲಾಗಿದೆ. ಆದರೆ, ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ವಿವಿಧ ವಿಭಾಗ ಅಧ್ಯಾಪಕರ ಸಂಘದ ಪ್ರತಿನಿಧಿಗಳು ಬೋಧನಾ ಅವಧಿಯನ್ನು ಹೆಚ್ಚಿಸುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯನ್ನು ಪರಿಶೀಲಿಸಲಾಗಿ ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸಿರುವ ಹಿನ್ನಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಶಿಕ್ಷಣ ನೀತಿಯ ಸ್ನಾತಕ ಪದವಿಯ ಸಹ 1 ಮತ್ತು 2ನೇ ಸೆಮಿಸ್ಟರ್‌ನ ಪ್ರಮುಖ ಪತ್ರಿಕೆಗಳ ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸುವ ಕುರಿತು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕ ಪದವಿಯ 1 ಮತ್ತು 2ನೇ ಸೆಮಿಸ್ಟರ್‌ನ ಪ್ರಮುಖ ಪತ್ರಿಕೆಗಳ ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸಿ ಬೋಧಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು    ಕುಲಪತಿಗಳು

| ಅಧ್ಯಯನ ಮಂಡಳಿ(BOS) | |
|---|---|
| ವಿಷಯ ಸಂಖ್ಯೆ: | ಸಿಂ.02(g)/(10/24) |

## -: ಟಿಪ್ಪಣಿ :-

**ವಿಷಯಃ 2024-25ನೇ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಕಡ್ಡಾಯ ವಿಷಯಗಳನ್ನು ಬೋಧಿಸುವ ಹಾಗೂ ಪರೀಕ್ಷೆ ನಡೆಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಪದವಿಯ ಕೋರ್ಸ್‌ಗಳ 2016-17ರ ನಿಯಮಾವಳಿಯಂತೆ ಸಿ.ಬಿ.ಸಿ.ಎಸ್. ಪಠ್ಯಕ್ರಮಗಳಲ್ಲಿ ಆಯಾ ವಿಭಾಗದ ಎಲ್ಲಾ ವಿಷಯಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡಬೇಕಿರುತ್ತದೆ.

ಸದರಿ ಪಠ್ಯಕ್ರಮಗಳಲ್ಲಿ ಈ ಕೆಳಕಂಡ ಕಡ್ಡಾಯ ವಿಷಯಗಳನ್ನು ಬೋಧನೆ ಮಾಡಬೇಕಿರುತ್ತದೆ. ಅದರಲ್ಲಿ Additional Credits ಪ್ರತಿ ಸೆಮಿಸ್ಟರ್‌ಗೆ 02 ಕ್ರೆಡಿಟ್‌ನಂತೆ ನಮೂದಿಸಬೇಕಿರುತ್ತದೆ.

ಆದರೆ, ಸದರಿ ಕ್ರೆಡಿಟ್ ಅಂಕಗಳನ್ನು ಉಳಿದ ವಿಷಯಗಳ ಒಟ್ಟಾರೆ ಅಂಕಗಳ ಜೊತೆ ಹಾಗೂ SGPA ಜೊತೆ ಸೇರ್ಪಡಿಸುವಂತಿಲ್ಲ.

| Sl.no | Semester | Paper Name | Credits |
|---|---|---|---|
| 1 | I Semester | English Language and Communication Skill | 2 |
| 2 | II Semester | Computer Skill | 2 |
| 3 | IV Semester | Personality Development | 2 |

ಮುಂದುವರೆದು, 2024-25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಕಡ್ಡಾಯ ವಿಷಯಗಳನ್ನು ಬೋಧಿಸುವ ಹಾಗೂ ಪರೀಕ್ಷೆ ನಡೆಸುವ ಕುರಿತು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಈ ಮೇಲ್ಕಂಡ ಕಡ್ಡಾಯ ವಿಷಯಗಳಿಗೆ ಸಂಬಂಧಿಸಿದಂತೆ 1ನೇ ಸೆಮಿಸ್ಟರ್‌ನಲ್ಲಿ English Language and Communication Skill ಬದಲಾಗಿ English Language and Soft Skill ವಿಷಯವನ್ನು ಬೋಧಿಸುವಂತೆ ಹಾಗೂ ಈ ಮೇಲ್ಕಂಡ ಪಟ್ಟಿಯಲ್ಲಿನ 03 ವಿಷಯಗಳನ್ನೊಳಗೊಂಡಂತೆ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನದ ಕುರಿತು 1 ಸಂಯುಕ್ತ ಅಧ್ಯಯನ ಮಂಡಳಿಯನ್ನು ರಚಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(10/24) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಿಬ್ಬಂದಿ/ ನಿವೃತ್ತ ಬೋಧಕ / ಬೋಧಕೇತರ ಸಿಬ್ಬಂದಿಗಳಿಗೆ 7ನೇ ರಾಜ್ಯ ಪರಿಷ್ಕೃತ ವೇತನವನ್ನು ಅಳವಡಿಸಿಕೊಂಡಿರುವ ಕುರಿತು.**

ಉಲ್ಲೇಖ: ಸರ್ಕಾರದ ಪತ್ರಸಂಖ್ಯೆ:ಆಇ 21 ಎಸ್‌ಆರ್‌ಪಿ 2024, ದಿನಾಂಕ:22.07.2024

*********

ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರವು ಅನುಷ್ಠಾನಗೊಳಿಸಿರುವ 7ನೇ ರಾಜ್ಯ ಪರಿಷ್ಕೃತ ವೇತನವನ್ನು ವಿಶ್ವವಿದ್ಯಾನಿಲಯ/ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಿಬ್ಬಂದಿ ಹಾಗೂ ನಿವೃತ್ತ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ 7ನೇ ರಾಜ್ಯ ಪರಿಷ್ಕೃತ ವೇತನವನ್ನು ಅಳವಡಿಸಿಕೊಂಡಿರುವ ಹಿನ್ನೆಲೆಯಲ್ಲಿ ದಿನಾಂಕ:01.08.2024 ರಂದು ಪರಿಷ್ಕೃತ ವೇತನವನ್ನು ಪಾವತಿ ಮಾಡಲಾಗಿದ್ದು, ಸದರಿ ವಿಷಯವನ್ನು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

:: ನಿರ್ಣಯ ::

ಮಾನ್ಯ ಕರ್ನಾಟಕ ಸರ್ಕಾರವು ಅನುಷ್ಠಾನಗೊಳಿಸಿರುವ 7ನೇ ರಾಜ್ಯ ಪರಿಷ್ಕೃತ ವೇತನವನ್ನು ದಾವಣಗೆರೆ ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಿಬ್ಬಂದಿ ಹಾಗೂ ನಿವೃತ್ತ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನಿಯಮಾನುಸಾರ ಅಳವಡಿಸಿಕೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(10/24) |

## –: ಟಿಪ್ಪಣಿ :–

ವಿಷಯ: **ಡಾ. ಪ್ರಸನ್ನ ಕುಮಾರ್ ಬಿ.ಸಿ. ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರು ಸಂಶೋಧನಾ ಪ್ರಬಂಧವನ್ನು ಮಂಡಿಸಲು Monash University, ಮಲೇಶಿಯಾ – ಇಲ್ಲಿಗೆ ಹೋಗಿ ಬರಲು ಅನುಮತಿ ನೀಡುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ ಇವರ ಪತ್ರಸಂಖ್ಯೆ:ದಾವಿವಿ:ಗಅ:2024–24/233 ದಿನಾಂಕ:21.09.2024

*********

ಡಾ. ಪ್ರಸನ್ನ ಕುಮಾರ್ ಬಿ.ಸಿ. ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಉಲ್ಲೇಖಿತ ಪತ್ರದಲ್ಲಿ – Monash University, ಮಲೇಶಿಯಾ ಇವರು ದಿನಾಂಕ:07.11.2024 ರಿಂದ 10.12.2024ರ ವರೆಗೆ ನಡೆಯುವ Symposium ನಲ್ಲಿ ಸಂಶೋಧನಾ ಪ್ರಬಂಧವನ್ನು ಮಂಡಿಸಲು ಆಹ್ವಾನಿಸಿದ್ದಾರೆ. ಆದ್ದರಿಂದ, ದಿನಾಂಕ:05.12.2024 ರಿಂದ 13.12.2024 (ಒಟ್ಟು 09 ದಿನ ಪ್ರಯಾಣ ದಿನಗಳು ಸೇರಿ) OOD ರಜೆಗಳನ್ನು ಮಂಜೂರು ಮಾಡಲು ಹಾಗೂ ಹೋಗಿ ಬರಲು ತಗಲುವ ಪ್ರಯಾಣ ಭತ್ಯೆಯನ್ನು ನೀಡುವಂತೆ ಕೋರಿರುತ್ತಾರೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಪ್ರಸನ್ನ ಕುಮಾರ್ ಬಿ.ಸಿ. ಶೈಕ್ಷಣಿಕ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ Monash University, ಮಲೇಶಿಯಾ ಗೆ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಲು ಮಲೇಶಿಯಾ ದೇಶಕ್ಕೆ ಹೋಗಿ ಬರಲು ಅನ್ಯಕಾರ್ಯ ನಿಮಿತ್ತ (OOD) ರಜೆ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(10/24) |

## -: ಟಿಪ್ಪಣಿ :-

**ವಿಷಯ:** **ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರುಗಳ ನೇಮಕ ಹಾಗೂ ಸಂಯೋಜನಾಧಿಕಾರಿಯ ನೇಮಕಾತಿಗೆ ಘಟನೋತ್ತರ ಅನುಮತಿ ಕುರಿತು.**

ಉಲ್ಲೇಖ: ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಮಾಸನಿ/540/ 2024-25/2198, ದಿನಾಂಕ: 19.09.2024

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಬಿ.ಪಿ. ನಂದೀಶ್ವರಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ - ಇವರನ್ನು ಸ್ನಾತಕೋತ್ತರ ಅಪರಾಧಶಾಸ್ತ್ರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ದಿನಾಂಕ: 19.09.2024ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಮುಂದುವರೆದು ಈ ಕೆಳಕಂಡ ವಿಭಾಗದ ಅಧ್ಯಕ್ಷರುಗಳ (ಎರಡು ವರ್ಷಗಳ) ಅವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ, ಸದರಿ ವಿಭಾಗದಲ್ಲಿ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರುಗಳು ಇಲ್ಲದೇ ಇರುವುದರಿಂದ ಸದರಿಯವರನ್ನು ಮುಂದುವರಿಸಬೇಕೆಂಬುದರ ಬಗ್ಗೆ ದಿನಾಂಕ:03.10.2024 ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ **ಡಾ. ಬಿ.ಪಿ. ನಂದೀಶ್ವರಪ್ಪ - ಇವರನ್ನು ಸ್ನಾತಕೋತ್ತರ ಅಪರಾಧಶಾಸ್ತ್ರ** ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ನೇಮಕಾತಿ ಮಾಡಿರುವುದಕ್ಕೆ ಘಟನೋತ್ತರ ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

| ಕ್ರ.ಸಂ. | ಹೆಸರು | ವಿಭಾಗ | ಅವಧಿ |
|---|---|---|---|
| 01 | ಡಾ. ವಿ. ಕುಮಾರ್, ಹಿರಿಯ ಪ್ರಾಧ್ಯಾಪಕರು | ಜೀವರಸಾಯನಶಾಸ್ತ್ರ | 02.10.2024 |
| 02 | ಡಾ. ವೆಂಕಟರಾವ್.ಎಂ. ಪಲಾಟೆ, ಪ್ರಾಧ್ಯಾಪಕರು | ಇತಿಹಾಸ | 31.10.2024 |

## :: ನಿರ್ಣಯ ::

ಡಾ. ಬಿ.ಪಿ. ನಂದೀಶ್ವರಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ - ಇವರನ್ನು ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ 02 ವರ್ಷಗಳ ಅವಧಿಗೆ ನೇಮಕ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಇತಿಹಾಸ ಮತ್ತು ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಯಾವುದೇ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ ಸದರಿಯವರುಗಳನ್ನೇ 02 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(d)/(10/24) |

# -: ಟಿಪ್ಪಣಿ :-

ವಿಷಯಃ **2020-21ನೇ ಸಾಲಿನ ಕಂಡಿಕೆ ಸಂಖ್ಯೆ/21.10 ರಲ್ಲಿ ಬೋಧಕೇತರ ನೌಕರರ ವಾರ್ಷಿಕ ವೇತನ ಬಡ್ತಿಯಲ್ಲಿ ಆಗಿರುವ ವ್ಯತ್ಯಾಸದ ಮೊತ್ತವನ್ನು ವಸೂಲಾತಿಗೆ ಕ್ರಮವಹಿಸುವ ಕುರಿತು.**

ಉಲ್ಲೇಖ:
1. ಲೆಕಪರಿಶೋಧಕರ ಆಡಿಟ್ ವಿಚಾರಣಾ ಪತ್ರ ಸಂಖ್ಯೆ 31, ದಿನಾಂಕಃ24.07.2024
2. ಲೆಕ್ಕಪರಿಶೋಧಕರ ಆಡಿಟ್ ವಿಚಾರಣಾ ಪತ್ರ ಸಂಖ್ಯೆ 66, ದಿನಾಂಕಃ11.09.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ25.09.2024

*********

ಉಲ್ಲೇಖ (01)ರ ಪತ್ರದಲ್ಲಿ 2020-21ನೇ ಸಾಲಿನಲ್ಲಿ ಲೆಕ್ಕ ಪರಿಶೋಧನಾಧಿಕಾರಿಗಳು, ಬೋಧಕೇತರ ನೌಕರರಿಗೆ ಮುಂಬಡ್ತಿ ನೀಡಲಾಗಿದ್ದ ಸಮಯದಲ್ಲಿ ವಾರ್ಷಿಕ ವೇತನ ಬಡ್ತಿಯಲ್ಲಿ ಅಗಿರುವ ವ್ಯತ್ಯಾಸದ ಮೊತ್ತವನ್ನು ಪರಿಶೀಲಿಸಿ ಲೆಕ್ಕ ಪರಿಶೀಲನೆಗೆ ಹಾಜರುಪಡಿಸಲು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ನೌಕರರುಗಳ ವಾರ್ಷಿಕ ವೇತನ ಬಡ್ತಿಯಲ್ಲಿ ಆಗಿರುವ ವ್ಯತ್ಯಾಸದ ಮೊತ್ತವನ್ನು ಪರಿಶೀಲನೆ ಮಾಡಿ ಲೆಕ್ಕಪರಿಶೋದಕರಿಗೆ ಹಾಜರುಪಡಿಸಲಾಗಿರುತ್ತದೆ. ತತ್ಸಂಬಂಧವಾಗಿ ಈ ಕೆಳಕಂಡ 06 ಜನ ಬೊಧಕೇತರ ನೌಕರರ ವ್ಯತ್ಯಾಸದ ಒಟ್ಟು ಮೊತ್ತ ರೂ.3,79,047/-ಗಳಾಗಿರುತ್ತದೆ,

ಉಲ್ಲೇಖ (02) ರಲ್ಲಿ ಸದರಿ ಮೊತ್ತವನ್ನು ಸಂಬಂಧಿಸಿದ ನೌಕರರಿಂದ ವಸೂಲಾತಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ. ಆದುದರಿಂದ ನೌಕರರ ಪ್ರತಿ ತಿಂಗಳ ವೇತನದಲ್ಲಿ ಕಟಾವಣೆ ಮಾಡುವ ಕುರಿತಂತೆ ದಿನಾಂಕಃ03.10.2024 ರಂದು ನಡೆಯಲಿರುವ ಮಾನ್ಯ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಗಳು ಈ ಕೆಳಕಂಡಂತಿವೆ.**

| Sl.No | Name | Designation | Due | Drawn | Difference |
|---|---|---|---|---|---|
| 1 | Manjunatha B.M | Superintendent | 1,35,098/- | 1,49,154/- | 14,056/- |
| 2 | Girijamma N H | Senior Assistant | 6,60,507/- | 6,79,857/- | 19,350/- |
| 3 | Devaraja G N | Superintendent | 3,40,864/- | 4,07,611/- | 66,747/- |
| 4 | Nanjappa K M | Superintendent | 6,87,510/- | 7,68,285/- | 80,775/- |
| 5 | Rangaswamy R L | Superintendent | 4,04,901/- | 4,60,929/- | 56,028/- |
| 6 | Chandrashekar C | FDA | 8,74,136/- | 10,16,227/- | 1,42,091/- |
| | | **Total** | **31,03,016/-** | **34,82,063/-** | **3,79,047/-** |

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಈ ಮೇಲ್ಕಂಡ 06 ಬೋಧಕೇತರ ನೌಕರರುಗಳಿಗೆ ಮುಂಬಡ್ತಿ ನೀಡಲಾಗಿದ್ದ ಸಮಯದಲ್ಲಿ ವಾರ್ಷಿಕ ವೇತನ ಬಡ್ತಿಯಲ್ಲಿ ಆಗಿರುವ ವ್ಯತ್ಯಾಸದ ಮೊತ್ತವನ್ನು ಸದರಿ ನೌಕರರ ಪ್ರತಿ ತಿಂಗಳ ವೇತನದಲ್ಲಿ ಕ್ರ.ಸಂ. 1 ಮತ್ತು 2 ರಲ್ಲಿನ ನೌಕರರಿಗೆ ಸಮಾನ 03 ಕಂತುಗಳಲ್ಲಿ ಹಾಗೂ ಕ್ರ.ಸಂ. 3 ರಿಂದ 06 ವರೆಗಿನ ನೌಕರರಿಗೆ ಸಮಾನ 10 ಕಂತುಗಳಲ್ಲಿ ಕಟಾವಣೆ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(e)/(10/24) |

## –: ಟಿಪ್ಪಣಿ :–

**ವಿಷಯ:** **ಉಪಕುಲಸಚಿವರ ಹುದ್ದೆಯ ಕಾಲ್ಪನಿಕ ವೇತನಕ್ಕೆ ಬದಲಾಗಿ ವಾರ್ಷಿಕ ವೇತನ ಮಂಜೂರು ಮಾಡಿ ಪ್ರಭಾರೆ ಮೊತ್ತ ಕಟಾವಣೆ ಮಾಡುವ ಬಗ್ಗೆ ಹಾಗೂ ವ್ಯತ್ಯಾಸದ ಮೊತ್ತ ಮರು ಪಾವತಿಯ ಕುರಿತು.**

ಉಲ್ಲೇಖ: ಶ್ರೀಮತಿ ಉಮಾದೇವಿ ವಿ, ಉಪಕುಲಸಚಿವರು, ದಾವಿವಿ ಇವರ ಮನವಿ ದಿನಾಂಕ:12.08.2024.

*********

ಶ್ರೀಮತಿ ಉಮಾದೇವಿ ವಿ. ಉಪಕುಲಸಚಿವರು, ಆಡಳಿತ ವಿಭಾಗ ಇವರಿಗೆ ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ KCSR ನಿಯಮ 32 ರಡಿ ದಿನಾಂಕ:26.07.2018 ರಂದು ಮುಂಬಡ್ತಿ ನೀಡಿ ದಿನಾಂಕ:24.09.2020 ರವರೆಗೆ ಪ್ರಭಾರೆ ಭತ್ಯೆ ಮಂಜೂರು ಮಾಡಲಾಗಿರುತ್ತದೆ. ಈ ಸಂಬಂಧ 06 ತಿಂಗಳಿಗಿಂತ ಹೆಚ್ಚು ಅವಧಿ ಪ್ರಭಾರೆ ಭತ್ಯೆ ಪಾವತಿಸಿರುವುದಕ್ಕೆ ಆಡಿಟ್ ಆಕ್ಷೇಪಣೆಯಾಗಿರುತ್ತದೆ. ಆದರೆ ಸದರಿಯವರಿಗೆ ಉಪಕುಲಸಚಿವರ ಹುದ್ದೆಗೆ DPC ಮೂಲಕ ಮುಂಬಡ್ತಿ ನೀಡುವಾಗ ಸರ್ಕಾರದ RPP ಕಾಯ್ದೆ 1978 ರಡಿ ಸ್ವತಂತ್ರ್ಯ ಪ್ರಭಾರದಡಿ ಸ್ಥಾನೀಕರಿಸಿದ ದಿನಾಂಕದಿಂದಲೇ ಅನ್ವಯಿಸುವಂತೆ ಮುಂಬಡ್ತಿಯನ್ನು ನೀಡಿರುವುದರಿಂದ (ಹಿಂದಿನ ದಿನಾಂಕದಿಂದಲೇ ಅನ್ವಯಿಸುವಂತೆ) ಮೇಲ್ಕಂಡ ಅವಧಿಯಲ್ಲಿನ ವೇತನವನ್ನು ಕಾಲ್ಪನಿಕವೆಂದು ಪರಿಗಣಿಸಿರುವುದನ್ನು ಪರಿಷ್ಕರಿಸಿ ಉಪಕುಲಸಚಿವರ ಶ್ರೇಣಿ ಜಾರಿಗೊಳಿಸಿ ವೇತನ ನಿಗದಿಗೊಳಿಸಬೇಕಾಗುತ್ತದೆ. ಸದರಿ ಅವಧಿಯಲ್ಲಿನ ವೇತನ ಮೊತ್ತದಲ್ಲಿ ಪ್ರಭಾರೆ ಮೊತ್ತ ಕಟಾಯಿಸಿಕೊಳ್ಳಲು ಹಾಗೂ ವ್ಯತ್ಯಾಸದ ಮೊತ್ತ ಮರುಪಾವತಿಸುವ ಕುರಿತು ಚರ್ಚಿಸಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಶ್ರೀಮತಿ ಉಮಾದೇವಿ ವಿ. ಉಪಕುಲಸಚಿವರು, ಆಡಳಿತ ವಿಭಾಗ ಇವರಿಗೆ ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ DPC ಮೂಲಕ ಮುಂಬಡ್ತಿ ನೀಡುವಾಗ ಸರ್ಕಾರದ RPP ಕಾಯ್ದೆ 1978 ರಡಿ ಸ್ವತಂತ್ರ್ಯ ಪ್ರಭಾರದಡಿ ಸ್ಥಾನೀಕರಿಸಿದ ದಿನಾಂಕದಿಂದಲೇ ಅನ್ವಯಿಸುವಂತೆ ಮುಂಬಡ್ತಿಯನ್ನು ನೀಡಿರುವುದರಿಂದ ದಿನಾಂಕ:26.07.2018 ರಿಂದ ದಿನಾಂಕ:24.09.2020 ರವರೆಗೆ ಅವಧಿಯಲ್ಲಿನ ವೇತನವನ್ನು ಕಾಲ್ಪನಿಕವೆಂದು ಪರಿಗಣಿಸಿರುವುದನ್ನು ಪರಿಷ್ಕರಿಸುವ ಕುರಿತು ಚರ್ಚಿಸಿ ನಿರ್ಣಯಿಸಲು ಹಣಕಾಸು ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(f)/(10/24) |

## –: ಟಿಪ್ಪಣಿ :–

**ವಿಷಯಃ ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು – Vice-Chancellor Leadership Program for State Public Universities to the UK – ನಲ್ಲಿ ಭಾಗವಹಿಸುವ ಕುರಿತು.**

*********

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರು ರಾಜ್ಯ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ ನಾಯಕತ್ವ ಕಾರ್ಯಕ್ರಮವನ್ನು (Vice-Chancellors Leadership Program for State Public Universities to UK) ನವೆಂಬರ್–2024ರ ಮಾಹೆಯಲ್ಲಿ ಆಯೋಜಿಸಿರುತ್ತಾರೆ. ಈ ಕಾರ್ಯಕ್ರಮದ ಮೂಲ ಉದ್ದೇಶ – ರಾಜ್ಯದ ವಿಶ್ವವಿದ್ಯಾನಿಲಯಗಳು, ಸಾರ್ವಜನಿಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆಯ್ದ ಸಂಶೋಧನಾ ಕ್ಷೇತ್ರಗಳಲ್ಲಿ ಪ್ರಯೋಜನಕಾರಿಯಾಗಿ ಕೆಲಸ ಮಾಡುವ ಸಹಯೋಗವನ್ನು ಹೊಂದಲು ಈ ನಿಯೋಗವನ್ನು ನಡೆಸಲು ಯೋಜಿಸುತ್ತಿದೆ.

ಆದ್ದರಿಂದ, ನವೆಂಬರ್–2024 ರ (Vice-Chancellors Leadership Program for State Public Universities to UK) ನಿಯೋಗದಲ್ಲಿ ಭಾಗವಹಿಸಲು ಪ್ರಯಾಣ, ವಸತಿ, ವೀಸಾ ಸೇರಿದಂತೆ ಉಪಕುಲಪತಿಗಳಿಗೆ 8 ದಿನಗಳ ಅವಧಿಗೆ ನಿಯೋಗದ ವೆಚ್ಚ ಅಂದಾಜು 5 ಲಕ್ಷ ರೂಪಾಯಿಗಳಾಗಿರುತ್ತದೆ ಮತ್ತು ಪ್ರಯಾಣ ವಿಮೆಯನ್ನು ಆಯಾ ವಿಶ್ವವಿದ್ಯಾಲಯಗಳು ಭರಿಸಬೇಕಾಗುತ್ತದೆ. ತತ್ಸಂಬಂಧ ಸದರಿ ವಿಷಯವನ್ನು ದಿನಾಂಕಃ03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ ನಾಯಕತ್ವ ಕಾರ್ಯಕ್ರಮವನ್ನು United Kindom ನಲ್ಲಿ ಆಯೋಜಿಸಿರುವುದರಿಂದ ಸದರಿ ಕಾರ್ಯಕ್ರಮಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ. ಬಿ. ಡಿ. ಕುಂಬಾರ ಇವರು 8 ದಿನಗಳ ಅವಧಿಗೆ ಹೋಗಿ ಬರಲು OOD, ಪ್ರಯಾಣ ಭತ್ಯೆ, ವಸತಿ ಭತ್ಯೆ, ವೀಸಾ ಸೇರಿದಂತೆ ಕುಲಪತಿಗಳಿಗೆ ನಿಯೋಗದ ವೆಚ್ಚ ಅಂದಾಜು 5 ಲಕ್ಷ ರೂಪಾಯಿ ಮತ್ತು ಪ್ರಯಾಣ ವಿಮೆಯನ್ನು ವಿಶ್ವವಿದ್ಯಾನಿಲಯದಿಂದ ಭರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.04(a)/(10/24) |

## -: ಟಿಪ್ಪಣಿ :-

ವಿಷಯ: **2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಹಾಗೂ ವಸತಿ ನಿಲಯಗಳ ಶುಲ್ಕ ಪರಿಷ್ಕರಣೆಯ ಕುರಿತು.**

ಉಲ್ಲೇಖ: ವಿವಿಧ ನಿಕಾಯಗಳ ಡೀನರ ಸಭೆಯ ನಡಾವಳಿ ದಿ:14.08.2024

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಹಾಗೂ ವಸತಿ ನಿಲಯಗಳ ಶುಲ್ಕದ ವಿವರಗಳ ಮೊತ್ತದ ಪರಿಷ್ಕರಣೆ ಮಾಡುವುದರೊಂದಿಗೆ ಶುಲ್ಕವನ್ನು ಶೇ.10 ರಷ್ಟು ಹೆಚ್ಚಿಸಿ ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಗಿರುವ ವಿಷಯವನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಹಾಗೂ ವಸತಿ ನಿಲಯಗಳ ಶುಲ್ಕಗಳನ್ನು 2024-25ನೇ ಸಾಲಿಗೆ **ಶೇ.10% ರಷ್ಟು ಹೆಚ್ಚಿಸಿ** ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸಿರುವ ಕುರಿತು ಚರ್ಚಿಸಿ ಅನುಮೋದಿಸಲಾಯಿತು.

ಕುಲಸಚಿವರು                ಕುಲಪತಿಗಳು

| ಶೈಕ್ಷಣಿಕ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.04(b)/(10/24) |

## -: ಟಿಪ್ಪಣಿ :-

**ವಿಷಯ: 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಕುರಿತು.**

ಉಲ್ಲೇಖ: ವಿವಿಧ ನಿಕಾಯಗಳ ಡೀನರ ಸಭೆಯ ನಡಾವಳಿ ದಿ:14.08.2024

*********

ಸರ್ಕಾರದ ನಿರ್ದೇಶನದಂತೆ, ವಾರ್ಷಿಕ ವರಮಾನ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (SC/ST) ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕ ಪಾವತಿಯಿಂದ ವಿನಾಯ್ತಿ ನೀಡಲಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳು ಅಂತಹ (SC/ST) ವಿದ್ಯಾರ್ಥಿಗಳಿಂದ ಪ್ರವೇಶಾತಿ ಸಂದರ್ಭದಲ್ಲಿ **"ವಿದ್ಯಾರ್ಥಿ ವೇತನ ಮಂಜೂರಾಗಿ ಏಳು ದಿನಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕವನ್ನು ಜಮಾ ಮಾಡಬೇಕು"** ಎಂಬ ಮುಚ್ಚಳಿಕೆ ಪತ್ರವನ್ನು ಪಡೆದು ಸಂಬಂಧಪಟ್ಟ ವಿಭಾಗದಲ್ಲಿ ಇಟ್ಟುಕೊಳ್ಳಬೇಕು. ಒಂದು ವೇಳೆ ನಿಗದಿತ ದಿನದೊಳಗೆ ಪ್ರವೇಶಾತಿ ಶುಲ್ಕ ಪಾವತಿಸದಿದ್ದಲ್ಲಿ **"ದಂಡ ಶುಲ್ಕ ರೂ.1000/-ಗಳನ್ನು ವಿಧಿಸಲು"** ಡೀನರ ಸಭೆಯಲ್ಲಿ ನಿರ್ಣಯಿಸಲಾಗಿರುವ ನಡಾವಳಿಗಳನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಸರ್ಕಾರದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (SC/ST) ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕ ಪಾವತಿಯಿಂದ ವಿನಾಯ್ತಿ ನೀಡಿರುವುದರಿಂದ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳು SC/ST ವಿದ್ಯಾರ್ಥಿಗಳಿಂದ ಪ್ರವೇಶಾತಿ ಸಂದರ್ಭದಲ್ಲಿ **"ವಿದ್ಯಾರ್ಥಿ ವೇತನ ಮಂಜೂರಾಗಿ ಏಳು ದಿನಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕವನ್ನು ಜಮಾ ಮಾಡಬೇಕು"** ಎಂಬ ಮುಚ್ಚಳಿಕೆ ಪತ್ರವನ್ನು ಹಾಗೂ ನಿಗದಿತ ದಿನದೊಳಗೆ ಪ್ರವೇಶಾತಿ ಶುಲ್ಕ ಪಾವತಿಸದಿದ್ದಲ್ಲಿ **"ದಂಡ ಶುಲ್ಕ ರೂ.1000/-ಗಳನ್ನು ವಿಧಿಸುವ"** ಕುರಿತು ಡೀನರುಗಳ ಸಭೆಯಲ್ಲಿ ನಿರ್ಣಯಿಸಿದ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(c)/(10/24) |

## -: ಟಿಪ್ಪಣಿ :-

**ವಿಷಯಃ ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು - ಇಲ್ಲಿನ ವಿದ್ಯಾರ್ಥಿಗಳನ್ನು ಶ್ರೀ ರಾಜರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು ಇಲ್ಲಿಗೆ ವರ್ಗಾವಣೆ ಮಾಡುವ ಕುರಿತು.**

*********

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ **ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು** ಇವರು 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯ ಶುಲ್ಕ ಪಾವತಿ ಮಾಡಿರುವುದಿಲ್ಲ ಹಾಗೂ ಕಾರಣಾಂತರಗಳಿಂದ ಕಾಲೇಜನ್ನು ಸ್ಥಗಿತಗೊಳಿಸುತ್ತಿರುವುದಾಗಿ ದಿನಾಂಕ:02.09.2024ರ ಪತ್ರದ ಮೂಲಕ ತಿಳಿಸಿರುತ್ತಾರೆ. ಆದರೆ, ಯಾವುದೇ ಕಾಲೇಜಿಗೆ ವಿಶ್ವವಿದ್ಯಾನಿಲಯವು ಮುಂದುವರಿಕೆ ಸಂಯೋಜನೆ ನೀಡುವಾಗ ಆಯಾ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಪೂರ್ಣಗೊಳಿಸಲು ಅವಕಾಶ ಕಲ್ಪಿಸುವಂತೆ ಆದೇಶ ನೀಡಲಾಗಿದ್ದರೂ, 03ನೇ ವರ್ಷದ ವಿದ್ಯಾರ್ಥಿಗಳನ್ನು **ಶ್ರೀ ರಾಜರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು- ಇಲ್ಲಿಗೆ ವರ್ಗಾಯಿಸುವಂತೆ ಕೋರಿರುತ್ತಾರೆ**. ಈ ಬಗ್ಗೆ ಪರಿಶೀಲಿಸಿ ಶ್ರೀರಾಜರಾಜೇಶ್ವರಿ ಕಾಲೇಜು, ಜಗಳೂರು- ಇಲ್ಲಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಕಾಲೇಜು ಬದಲಾವಣೆ ಶುಲ್ಕ ಪಡೆದು ಹಾಗೂ ಪ್ರವೇಶಮಿತಿಯೊಳಗೆ ವಿದ್ಯಾರ್ಥಿಗಳಿಗೆ ದಾಖಲಾಗಲು ಅವಕಾಶ ಕಲ್ಪಿಸುವ ವಿಷಯವನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು ಇವರು 2024-25ನೇ ಶೈಕ್ಷಣಿಕ ಸಾಲಿನಿಂದ ತಮ್ಮ ಕಾಲೇಜನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿ ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುವುದರಿಂದ - ಸದರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 03 ನೇ ವರ್ಷದ ವಿದ್ಯಾರ್ಥಿಗಳು ವ್ಯಾಸಂಗ ಪೂರ್ಣಗೊಳಿಸಲು ಅನುಕೂಲವಾಗುವಂತೆ ಸದರಿ ವಿದ್ಯಾರ್ಥಿಗಳನ್ನು ಶ್ರೀ ರಾಜರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು - ಇಲ್ಲಿಗೆ ವರ್ಗಾಯಿಸಲು ಹಾಗೂ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಕಾಲೇಜು ಬದಲಾವಣೆ ಶುಲ್ಕ ಪಡೆದು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(10/24) |

## -ಃ ಟಿಪ್ಪಣಿ ಃ-

**ವಿಷಯಃ ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಸರಣಾ ವರದಿಯ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 47(4) ರನ್ವಯ ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ಅನುಸರಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 47(4) ರನ್ವಯ ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ಅನುಸರಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)/(10/24) |

## –: ಟಿಪ್ಪಣಿ :–

**ವಿಷಯಃ ತಾಂತ್ರಿಕ/ ಹಣಕಾಸು ಬಿಡ್ ತೆರೆಯುವ/ ಮೌಲ್ಯಮಾಪನ ನಡೆಸಿದ ಸಭಾ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ 2024–25ನೇ ಸಾಲಿನಲ್ಲಿ **ನಿಶ್ಚಿತ ಠೇವಣಿಗಳ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲು** E-Portal ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು.

ಈ ಸಂಬಂಧ, ದಿನಾಂಕ:21.09.2024 ರಂದು ಇ-ಟೆಂಟರ್ ತಾಂತ್ರಿಕ ಬಿಡ್ ಹಾಗೂ ದಿನಾಂಕ:25.09.2024 ರಂದು ಇ–ಟೆಂಡರ್ ಹಣಕಾಸು ಬಿಡ್ ತರೆಯುವ ಮೌಲ್ಯಮಾಪನ ಮಾಡಿದ ಸಭಾ ನಡಾವಳಿಗಳನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ 2024–25ನೇ ಸಾಲಿನಲ್ಲಿ ನಿಶ್ಚಿತ ಠೇವಣಿಗಳನ್ನು ಹೂಡಿಕೆ ಮಾಡಲು ವಿವಿಧ ರಾಷ್ಟ್ರೀಕತ ಹಾಗೂ ಆರ್.ಆರ್.ಬಿ. ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಇದರಲ್ಲಿ ಭಾಗವಹಿಸಿದ 04 ಬ್ಯಾಂಕ್‌ಗಳಲ್ಲಿ 02 ಬ್ಯಾಂಕ್‌ಗಳು ಖಾಸಗಿ ವಲಯದ ಬ್ಯಾಂಕ್‌ಗಳಾಗಿದ್ದು ತಾಂತ್ರಿಕವಾಗಿ ಅನರ್ಹವಾಗಿರುತ್ತವೆ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕ್ ಸರ್ಕಾರದ ಆರ್ಥಿಕ ಇಲಾಖೆಯ ಮಾನದಂಡಗಳಿಗೆ ಅನುಗುಣವಾಗಿ ಇರದೇ ಇರುವುದರಿಂದ ತಾಂತ್ರಿಕವಾಗಿ ಅನರ್ಹವಾಗಿರುತ್ತದೆ. ರಾಷ್ಟ್ರೀಕೃತ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಇಂಡಿಯಾ ಇವರು ಮಾತ್ರ ತಾಂತ್ರಿಕವಾಗಿ ಅರ್ಹರಾಗಿದ್ದು ಹಣಕಾಸು ಬಿಡ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಹಾಗೂ ಇವರು ಹೆಚ್ಚಿನ ದರವನ್ನು ನಮೂದಿಸಿ **$H_1$ (ರೂ. 7.37%)** ಹಣಕಾಸು ಬಿಡ್ ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಹಿಂದಿನ ಎಲ್ಲಾ ನಿಶ್ಚಿತ ಠೇವಣಿಗಳನ್ನು ಮುಕ್ತಾಯಗೊಳಿಸಿ ಹೊಸ ದರದಂತೆ ಈ ಎಲ್ಲಾ ಠೇವಣಿಗಳನ್ನು ನವೀಕರಿಸಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(10/24) |

# –:ಟಿಪ್ಪಣಿ:–

**ವಿಷಯ: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಕಾರ್ಯಕ್ರಮಗಳು ಕುಂಟಿತವಾಗಿದ್ದು, ಇವುಗಳನ್ನು ಯುಜಿಸಿ ನಿಯಮಗಳನ್ವಯ ಸಮರ್ಪಕವಾಗಿ ಜಾರಿಗೆ ತರುವ ಕುರಿತು.**

*******

ಉನ್ನತ ಶಿಕ್ಷಣ ಸಂಸ್ಥೆಗಳಿಂದ (HEIS) ಗುಣಮಟ್ಟದ ಶಿಕ್ಷಣವನ್ನು ಹೆಚ್ಚಿಸಲು ಸಂಶೋಧನೆ ಮತ್ತು ನಾವಿನ್ಯತೆ ಪ್ರಮುಖ ಅಂಶಗಳಾಗಿವೆ. ನಾವಿನ್ಯತೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ಒತ್ತು ನೀಡುವ ಮೂಲ ಹಾಗೂ ಬಲವಾದ ಉನ್ನತ ಶಿಕ್ಷಣ ಪರಿಸರ ವ್ಯವಸ್ಥೆಯನ್ನು ಹೊಂದುವ ಮೂಲಕ ಮಾತ್ರ ನಮ್ಮ ದೇಶದ ಸಾಮಾಜಿಕ ಸವಾಲುಗಳನ್ನು ಪರಿಹರಿಸಬಹುದು. ಈ ವಿಷಯದಲ್ಲಿ ಯು.ಜಿ.ಸಿ. ಸಹ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಸಂಶೋಧನೆ ಅಭಿವೃದ್ಧಿಗಾಗಿ ಸರ್ಕಾರ ಕೈಗಾರಿಕೆ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲ ಕ್ರೋಢಿಕರಿಸಲು ವಿಶ್ವವಿದ್ಯಾನಿಲಯಗಳು ಕ್ರಮ ಕೈಗೊಳ್ಳಬೇಕಾಗುತ್ತದೆ. ಹಲವು ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಸಂಶೋಧನಾ ಚಟುವಟಿಕೆಗಳಿಗಾಗಿ ತಮ್ಮ ವಾರ್ಷಿಕ ಆಯವ್ಯಯದಲ್ಲಿ ಹಣವನ್ನು ಮೀಸಲಿಡುತ್ತಿವೆ. ಈ ಹಿಂದೆ ರಾಜ್ಯ ಸರ್ಕಾರದಿಂದಲೂ ಈ ಬಗ್ಗೆ ಆದೇಶವನ್ನು ಹೊರಡಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳು ಸಂಶೋಧನೆಗಾಗಿ ಒಂದು ಕಾರ್ಪಸ್ ನಿಧಿಯನ್ನು ಸ್ಥಾಪಿಸಿ ತಮ್ಮ ವಾರ್ಷಿಕ ಬಜೆಟ್‌ನಲ್ಲಿ ಕನಿಷ್ಟ ಶೇ. 7% ರಷ್ಟು ಹಣವನ್ನು ಮೀಸಲಿರಿಸಲು ಮತ್ತು ಸದರಿ ಹಣವನ್ನು ಈ ಉದ್ದೇಶಕ್ಕಾಗಿಯೇ ಬಳಸಲು ವಿಶ್ವವಿದ್ಯಾನಿಲಯಗಳಿಗೆ ಸೂಚಿಸಬಹುದಾಗಿದೆ. ಈ ವಿಷಯನ್ನು ಪರಿಷತ್ತಿನ ಪರಿಗಣನೆಗೆ ಮತ್ತು ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**ನಿರ್ಣಯ:**

**ಎಲ್ಲಾ ವಿಶ್ವವಿದ್ಯಾನಿಲಯಗಳು ತಮ್ಮ ಆಂತರಿಕ ಸಂಪನ್ಮೂಲಗಳಿಂದ ಸಂಗ್ರಹವಾಗುವ ಆದಾಯದಲ್ಲಿ ಹಣವನ್ನು ಸಂಶೋಧನೆಗೆ ಒತ್ತು ನೀಡಿ ಚಟುವಟಿಕೆಗಳನ್ನು ಹೆಚ್ಚಿಸಲು ಶೇ. 7% ರಷ್ಟು ಹಣವನ್ನು ಸಂಶೋಧನಾ ಕಾರ್ಯಗಳಿಗೆ ಮೀಸಲಿಡುವಂತೆ ಸೂಚಿಸಲಾಯಿತು.**

ಮೇಲ್ಕಂಡ ವಿಷಯವು ಉನ್ನತ ಶಿಕ್ಷಣ ಪರಿಷತ್ತಿನ 24ನೇ ಸಾಮಾನ್ಯ ಸಭೆ ದಿನಾಂಕ:19.09.2024 ರಂದು ಜರುಗಿದ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗಿರುವ ಕುರಿತು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು ಯು.ಜಿ.ಸಿ. ಹಾಗೂ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ತಿನ ನಿರ್ಣಯದಂತೆ ಸಂಶೋಧನೆಗಾಗಿ ಒತ್ತು ನೀಡಿ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಸಂಗ್ರಹವಾಗುವ ಆದಾಯದಲ್ಲಿ ಸಂಶೋಧನೆ ಚಟುವಟಿಕೆಗಳನ್ನು ಹೆಚ್ಚಿಸಲು ಶೇಕಡ 7% ರಷ್ಟು ಹಣವನ್ನು ಸಂಶೋಧನಾ ಕಾರ್ಯಗಳಿಗೆ ಮೀಸಲಿಡುವಂತೆ ಸೂಚಿಸಲಾದಂತೆ ಹಾಗೂ ಸದರಿ ಹಣವನ್ನು ಈ ಉದ್ದೇಶಕ್ಕಾಗಿಯೇ ಬಳಸುವ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ.(IQAC) ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(10/24) |

## –:ಟಿಪ್ಪಣಿ:–

ವಿಷಯ: **2023–24ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಅನುಮೋದಿಸುವ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2023–24ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಕರಡು ವರದಿಯನ್ನು ಸಿದ್ದಪಡಿಸಲಾಗಿದ್ದು, ಸದರಿ ವರದಿಯನ್ನು ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:27.09.2024ರ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ವಾರ್ಷಿಕ ವರದಿಯ (Annual Report) ಕರಡು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ.(IQAC) ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(b)/(10/24) |

## –:ಟಿಪ್ಪಣಿ:–

**ವಿಷಯ: 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನಾ ವರದಿ (AAA Report) ಅನುಮೋದನೆ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನಾ ವರದಿ (AAA Report) ಕರಡು ವರದಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವರದಿಯನ್ನು ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:27.09.2024ರ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನಾ ವರದಿಯ (AAA Report) ಕರಡು ಪ್ರತಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ಸಿಂ.07(a)/(10/24) |

## –:ಟಿಪ್ಪಣಿ:–

**ವಿಷಯ:** **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಂಡಿರುವ ಕುರಿತು.**

ಉಲ್ಲೇಖ:
1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು–ಇವರ ಪತ್ರ ಸಂ:ಸ.ಪ್ರ.ದ.ಕಾ./145/2024–25 ದಿನಾಂಕ:23.07.2024
2. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು–ಇವರ ಪತ್ರ ಸಂ:ಸ.ಪ್ರ.ದ.ಕಾ./125/2024–25 ದಿನಾಂಕ:02.08.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.09.2024

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದ ನಿಗದಿತ ದಿನಾಂಕದೊಳಗೆ ಸಂಯೋಜನಾ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬದ ಕುರಿತು ಪರಿಶೀಲಿಸಿದ ತರುವಾಯ ಉಲ್ಲೇಖಿತ(2)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ನೀಡಿರುತ್ತದೆ. ತತ್ಸಂಬಂಧ, ಸದರಿ ಕಾಲೇಜಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಲಾಗಿರುವ ವಿಷಯವನ್ನು **ದಿನಾಂಕ:27.09.2024 ರಂದು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ಸಿಂ.07(b)/(10/24) |

## –:ಟಿಪ್ಪಣಿ:–

**ವಿಷಯ:** **ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಂಡಿರುವ ಕುರಿತು.**

ಉಲ್ಲೇಖ:
1. ಪ್ರಾಂಶುಪಾಲರು, ಎಂ.ಬಿ.ಆರ್. ಸಿರಿಗೆರೆ – ಇವರ ಪತ್ರ ಸಂ:ಎಂಬಿಆರ್‌ಡಿಸಿ/2024 ದಿನಾಂಕ:03.08.2024
2. ಪ್ರಾಂಶುಪಾಲರು, ಎಂ.ಬಿ.ಆರ್. ಸಿರಿಗೆರೆ – ಇವರ ಪತ್ರ ಸಂ: ದಿನಾಂಕ:29.08.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.09.2024

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದ ನಿಗದಿತ ದಿನಾಂಕದೊಳಗೆ ಸಂಯೋಜನಾ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬದ ಕುರಿತು ಪರಿಶೀಲಿಸಿದ ತರುವಾಯ ಉಲ್ಲೇಖಿತ(2)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ನೀಡಿರುತ್ತದೆ.

ತತ್ಸಂಬಂಧ, ಸದರಿ ಕಾಲೇಜಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಲಾಗಿರುವ ವಿಷಯವನ್ನು **ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ಸಿಂ.07(c)/(10/24) |

## –:ಟಿಪ್ಪಣಿ:–

**ವಿಷಯ: 2024–25ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಯೋಜನಾ ಕಾರ್ಯಕ್ಕೆ ನಿಯೋಜಿಸಲಾಗಿದ್ದ ಅಧ್ಯಕ್ಷರು/ಸದಸ್ಯರುಗಳಿಗೆ ದಿನಭತ್ಯೆ ಮೊತ್ತವನ್ನು ಪಾವತಿಸಲು ಅನುಮೋದನೆ ಕೋರಿ.**

*******

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಸ್ನಾತಕೋತ್ತರ ಪದವಿ ಕಾಲೇಜುಗಳ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯಗಳಿಗೆ ಸಂಬಂಧಿಸಿದಂತೆ, ನಡೆಸಲಾಗುವ ತಪಾಸಣಾ ಕಾರ್ಯದ ವಿವಿಧ ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗಿದ್ದ ಅಧ್ಯಕ್ಷರು/ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ದಿನಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ.

ಈ ಕುರಿತು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯಗಳಿಗೆ ನಿಯೋಜಿಸಲಾಗಿದ್ದ ವಿವಿಧ ಸ್ಥಳೀಯ ತಪಾಸಣಾ ಸಮಿತಿಗಳ ಅಧ್ಯಕ್ಷರು/ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ TA ಹಾಗೂ ದಿನ ಭತ್ಯೆಯ ಒಟ್ಟು ಮೊತ್ತ ರೂ.1,91,500/– ಗಳನ್ನು ಸಂಬಂಧಿಸಿದ ಅಧ್ಯಕ್ಷರು/ ಸದಸ್ಯರುಗಳ ಖಾತೆಗೆ ಪಾವತಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.08(a)/(10/24) |

## –:ಟಿಪ್ಪಣಿ:–

**ವಿಷಯ: ಜುಲೈ/ ಸೆಪ್ಟೆಂಬರ್–2024 ರ ಸ್ನಾತಕ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನ ಸೇವೆ ಒದಗಿಸಿರುವ ವೆಚ್ಚಗಳ ಪಾವತಿಗೆ ಸಂಬಂಧಿಸಿದ ಉಪ ಸಮಿತಿ ಸಭಾ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

*******

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರುವ ಖರೀದಿ / ಸೇವೆಗಳನ್ನು ಪಡೆದ ವಿವಿಧ ಸಂಸ್ಥೆಯ ಉಪಸಮಿತಿ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:03.10.2024ರಂದು ಬೆಳಿಗ್ಗೆ 10:00 ಗಂಟೆಗೆ ಕುಲಸಚಿವರ (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಕೆಳಕಂಡಂತೆ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಪಡೆದ ಸೇವೆಯ ಬಿಲ್ಲುಗಳ ಹಣ ಪಾವತಿ ಮಾಡುವ ಕುರಿತು ದಾಖಲಾತಿಗಳನ್ನು ಪರಿಶೀಲನೆಗಾಗಿ ಉಪಸಮಿತಿ ಸಭೆಗೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಬಿಲ್ಲಿಗಳನ್ನು ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಈ ಕೆಳಕಂಡ ಸಂಸ್ಥೆಯವರಿಗೆ **ರೂ.5,94,900–00**ಗಳನ್ನು (ರೂಪಾಯಿ ಐದು ಲಕ್ಷದ ತೊಂಬತ್ನಾಲ್ಕು ಸಾವಿರದ ಒಂಬೈನೂರು ಮಾತ್ರ) ಪಾವತಿ ಮಾಡಲು ಶಿಫಾರಸ್ಸು ಮಾಡಲಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ ರೂ.ಗಳಲ್ಲಿ |
|---|---|---|---|
| 01 | M/s. AL-Hind Tours & Travels, Davanagere. | ಜುಲೈ/ಸೆಪ್ಟೆಂಬರ್–2024ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆಯನ್ನು ಪಡೆದ ಬಾಬ್ತು. | 5,94,900–00 |
| | (ರೂಪಾಯಿ ಐದು ಲಕ್ಷದ ತೊಂಬತ್ನಾಲ್ಕು ಸಾವಿರದ ಒಂಬೈನೂರು ಮಾತ್ರ) | ಒಟ್ಟು | **5,94,900–00** |

ಈ ಹಿನ್ನೆಲೆಯಲ್ಲಿ ಉಪ ಸಮಿತಿ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s. AL-Hind Tours & Travels, Davanagere ಇವರಿಗೆ ರೂ.5,94,900–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ಜುಲೈ/ ಸೆಪ್ಟೆಂಬರ್–2024ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯಲು ಇ–ಟೆಂಡರ್‌ನಲ್ಲಿ ದರ ಒಪ್ಪಂದ ಮಾಡಿಕೊಂಡ M/s. AL-Hind Tours & Travels, Davanagere - ವಾಹನಗಳನ್ನು ಬಾಡಿಗೆಗಾಗಿ ಪಡೆದ ಬಾಬ್ತು ರೂ.5,94,900/– ಗಳ ಬಿಲ್ಲುಗಳನ್ನು ದಿನಾಂಕ:03.10.2024ರ ಉಪಸಮಿತಿ (ಬೆಳಿಗ್ಗೆ:10.00 ಗಂಟೆಗೆ) ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು ರೂ.5,94,900/– ಗಳನ್ನು ಇ–ಟೆಂಡರ್‌ನಲ್ಲಿ ಯಶಸ್ವಿಯಾದ M/s. AL-Hind Tours & Travels, Davanagere – ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.08(b)/(10/24) |

## –:ಟಿಪ್ಪಣಿ:–

**ವಿಷಯ:** **2024–25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಲ್ಲಿ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷಾ ಕ್ರಮವನ್ನು ಜಾರಿಗೊಳಿಸುವ ಕುರಿತು.**

*******

ರಾಜ್ಯ ಸರ್ಕಾರವು, ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾಗಿ ಜಾರಿಗೊಳಿಸಲಾದ (NEP) UUCMS ಪದ್ಧತಿಯನುಸಾರ ಸ್ನಾತಕ ಪದವಿಗಳಲ್ಲಿ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲು ಅವಕಾಶಗಳಿರುವುದಿಲ್ಲ. ಈ ಕ್ರಮವನ್ನು ರಾಜ್ಯದ ಇತರೆ ಎಲ್ಲಾ ವಿಶ್ವವಿದ್ಯಾನಿಲಯಗಳು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅಳವಡಿಸಿಕೊಂಡು ಪಾಲಿಸಲಾಗುತ್ತಿದೆ.

ಅದರಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ಪರೀಕ್ಷೆಗಳಿಗೆ ಈ ಕ್ರಮವನ್ನು ಈಗಾಗಲೇ ಜಾರಿಗೊಳಿಸಲಾಗಿದ್ದು, ಪ್ರಸ್ತುತ ಸ್ನಾತಕೋತ್ತರ ಪದವಿಯ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲಾಗುವ ಕ್ರಮವನ್ನು ರದ್ದುಪಡಿಸಿ, 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸಲಾಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯನುಸಾರ ನಡೆಸಬೇಕಾಗಿರುವುದರಿಂದ ದಿನಾಂಕ:27.09.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ತತ್ಸಂಬಂದ, ಈ ವಿಷಯವನ್ನು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾಗಿ ಜಾರಿಗೊಳಿಸಲಾಗಿದ್ದ (NEP) UUCMS ಪದ್ಧತಿಯನುಸಾರ – ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿಯ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲಾಗುವ ಕ್ರಮವನ್ನು ರದ್ದುಪಡಿಸಿ, 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸಲಾಗುವ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ **ಸಮ ಮತ್ತು ಬೆಸ ಸೆಮಿಸ್ಟರ್‌ಗಳ** ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯನುಸಾರ ನಡೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.08(c)/(10/24) |

## -:ಟಿಪ್ಪಣಿ:-

**ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ಪರೀಕ್ಷಾ ಶುಲ್ಕ (ಬಿ.ಇಡಿ) ಪರಿಷ್ಕರಣೆ ಮಾಡುವ ಕುರಿತು.**

*******

ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ವಿದ್ಯಾರ್ಥಿಗಳಿಗೆ 1, 2, 3, 4ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡ ನಂತರದಲ್ಲಿ ಉತ್ತರ ಪತ್ರಿಕೆಯ ಜೆರಾಕ್ಸ್ / ಮರು ಸಂಕಲನ / ಮರು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಕಾಲಂ (3)ರಲ್ಲಿ ನಮೂದಿಸಲಾಗಿರುವ 2022-23ನೇ ಸಾಲಿನ ಶುಲ್ಕಗಳಿಗೆ ಕಾಲಂ (4)ರಲ್ಲಿ ನಮೂದಿಸಲಾಗಿರುವಂತೆ 2023-24ನೇ ಸಾಲಿಗೆ 10% ರಷ್ಟು ಹೆಚ್ಚಿಸಿ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಕುರಿತು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

| ಕ್ರ. ಸಂ. | ವಿವರ | ಪ್ರಸ್ತುತ ಇರುವ ಶುಲ್ಕ | ಶೇಕಡಾ 10% ರಷ್ಟು ಹೆಚ್ಚಿಸಿ ಪರಿಷ್ಕೃತ ಶುಲ್ಕ |
|---|---|---|---|
| 1 | 2 | 3 | 4 |
| 1 | ಜೆರಾಕ್ಸ್ ಪ್ರತಿಗೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.800-00 | ರೂ.880-00 |
| 2 | ಮರು ಸಂಕಲನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.300-00 | ರೂ.330-00 |
| 3 | ಮರು ಮೌಲ್ಯಮಾಪನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.650-00 | ರೂ.715-00 |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ವಿದ್ಯಾರ್ಥಿಗಳಿಗೆ, 1, 2, 3, 4ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡ ನಂತರದಲ್ಲಿ ಉತ್ತರ ಪತ್ರಿಕೆಯ ಜೆರಾಕ್ಸ್ / ಮರು ಸಂಕಲನ / ಮರು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನ ಶುಲ್ಕಗಳಿಗೆ 2023-24ನೇ ಸಾಲಿಗೆ **10% ರಷ್ಟು ಹೆಚ್ಚಿಸಿ** ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.08(d)/(10/24) |

## -:ಟಿಪ್ಪಣಿ:-

ವಿಷಯ: **2024-25ನೇ ಶೈಕ್ಷಣಿಕ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ಮಾಡುವ ಕುರಿತು.**

*******

ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ವಿವಿಧ ಪರೀಕ್ಷಾ ಶುಲ್ಕಗಳನ್ನು **2024-25ನೇ ಶೈಕ್ಷಣಿಕ ಸಾಲಿನಿಂದ 10% ರಷ್ಟು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಪಟ್ಟಿ** ಮಾಡಲಾಗಿರುವಂತೆ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಸಂಬಂಧ ಈ ವಿಷಯವನ್ನು **ದಿನಾಂಕ:27.09.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಮಂಡಿಸಿ ಅನುಮೋದನೆಗಾಗಿ ಪಡೆಯಲಾಗಿದೆ.** ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### <u>ಅನುಬಂಧ-1</u>

| | | 2023-24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | 2023-24ನೇ ಸಾಲಿಗೆ 10% ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | |
|---|---|---|---|---|---|---|---|---|---|---|---|---|---|
| | | Graduate Courses | | | | | | Graduate Courses | | | | | |
| Sl. No. | Particulars | BA | B.Sc. | B.Com. | BBA/ BCA/ BSW | B.Ed. | B.P.Ed. | BA | B.Sc. | B.Com. | BBA/ BCA/ BSW | B.Ed. | B.P.Ed. |
| 1 | Application Fee | 100 | 100 | 100 | 100 | 100 | 100 | 110 | 110 | 110 | 110 | 110 | 110 |
| 2 | Marks Card Fee (Per Semester) | 185 | 185 | 185 | 185 | 240 | 205 | 204 | 204 | 204 | 204 | 264 | 226 |
| 3 | I to VI Semester Whole Exam (per semester) | 565 | 715 | 615 | 955 | 1060 | 1155 | 622 | 787 | 677 | 1051 | 1166 | 1271 |
| 4 | Per Paper Theory (Reapter) | 170 | 170 | 170 | 200 | 220 | 240 | 187 | 187 | 187 | 220 | 242 | 264 |
| 5 | Per Practical (Reapter) | 130 | 130 | 0 | 130 | 0 | 155 | 143 | 143 | 0 | 143 | 0 | 171 |
| 6 | Practical (B.Ed. IV Semester) | | | | | 500 | | 0 | 0 | 0 | 0 | 550 | 0 |
| 7 | Practical (Reapter) (B.Ed. IV Semester) | | | | | 330 | | 0 | 0 | 0 | 0 | 363 | 0 |

| | | 2023-24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | 2023-24ನೇ ಸಾಲಿಗೆ 10% ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | |
|---|---|---|---|---|---|---|---|
| | | Post-Graduate Courses | | | Post-Graduate Courses | | |
| Sl. No. | Particulars | Chemistry / M.Ed. / M.P.Ed. | MA/ M.Sc.,/ M.Com/ MSW | MBA/ MCA/ MVA | Chemistry / M.Ed. / M.P.Ed. | MA/ M.Sc.,/ M.Com/ MSW | MBA/ MCA/ MVA |
| 1 | Application Fee | 100 | 100 | 100 | 110 | 110 | 110 |
| 2 | Marks Card Fee (Per Semester) | 185 | 185 | 185 | 204 | 204 | 204 |
| 3 | I to IV Semester Whole Exam (per semester) | 1915 | 1695 | 1915 | 2107 | 1865 | 2107 |
| 4 | Per Paper Theory (Reapter) | 375 | 375 | 375 | 413 | 413 | 413 |
| 5 | Per Practical (Reapter) | 375 | 375 | 375 | 413 | 413 | 413 |

ಪು.ತಿ.ನೋ..

ಕುಲಸಚಿವರು

ಕುಲಪತಿಗಳು

## ಅನುಬಂಧ–2

| 2024–25ನೇ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ವಿವರಗಳು | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | | 2023–24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | | 2024–25ನೇ ಸಾಲಿಗೆ 10%ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | | |
| Sl. No. | Particulars | BA | B.Sc. | B.Com. | BBA/ BCA/ BSW | B.Ed. | B.P.Ed. | PG | BA | B.Sc. | B.Com. | BBA/ BCA/ BSW | B.Ed. | B.P.Ed. | PG |
| 1 | Paper Seeing / Photo Copy | 787 | 787 | 787 | 787 | 880 | 0 | 0 | 866 | 866 | 866 | 866 | 968 | 0 | 0 |
| 2 | Retotalling | 242 | 242 | 242 | 336 | 330 | 0 | 0 | 266 | 266 | 266 | 370 | 363 | 0 | 0 |
| 3 | Revaluation | 336 | 336 | 336 | 484 | 715 | 0 | 0 | 370 | 370 | 370 | 532 | 787 | 0 | 0 |
| 4 | Challenge Valuation (per paper) | 0 | 0 | 0 | 0 | 0 | 0 | 2200 | 0 | 0 | 0 | 0 | 0 | 0 | 2420 |

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ವಿವಿಧ ಪರೀಕ್ಷಾ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ **10% ರಷ್ಟು ಹೆಚ್ಚಿಸಿ ಪರಿಷ್ಕರಣೆ** ಮಾಡಲಾದ ಅನುಬಂಧ–1 ಮತ್ತು ಅನುಬಂಧ–2 ರ ಪರೀಕ್ಷಾ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.08(e)/(10/24) |

## –:ಟಿಪ್ಪಣಿ:–

ವಿಷಯ: ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಪದವಿಯ 4ನೇ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಅಪೂರ್ಣ ಎಂಬ ಮಾಹಿತಿ ದಿನಪತ್ರಿಕೆಗಳಲ್ಲಿ ಪ್ರಸಾರವಾಗಿರುವ ಕುರಿತು.

*******

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸೆಪ್ಟಂಬರ್–2024ರಲ್ಲಿ ಜರುಗಿದ ಸ್ನಾತಕೋತ್ತರ ವಾಣಿಜ್ಯಶಾಸ್ತ್ರದ 4ನೇ ಸೆಮಿಸ್ಟರ್‌ನ Business Applications of Operation Research ವಿಷಯದ ಪರೀಕ್ಷೆಯನ್ನು ದಿನಾಂಕ:11.09.2024ರಂದು ಏರ್ಪಡಿಸಲಾಗಿತ್ತು. ಸದರಿ ವಿಷಯದ ಪರೀಕ್ಷೆಯನ್ನು ವಿದ್ಯಾರ್ಥಿಗಳು ಬರೆದಿರುತ್ತಾರೆ. ಸದರಿ ವಿಷಯದ ಪರೀಕ್ಷೆಯ ಪ್ರಶ್ನೆ ಪತ್ರಿಕೆಯು ಅಪೂರ್ಣ ಎಂಬ ಮಾಹಿತಿಯು ದಿನಾಂಕ:12.09.2024ರ ದಿನಪತ್ರಿಕೆಗಳಲ್ಲಿ ಪ್ರಸಾರವಾಗಿರುತ್ತದೆ. ಈ ಸಂಬಂಧವಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಂದ/ ಪೋಷಕರುಗಳಿಂದಾಗಲಿ ಇದುವರೆಗೂ ಯಾವುದೇ ದೂರುಗಳು ಬಂದಿರುವುದಿಲ್ಲ.

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ಸೆಪ್ಟಂಬರ್–2024ರಲ್ಲಿ ಜರುಗಿದ ಸ್ನಾತಕೋತ್ತರ ವಾಣಿಜ್ಯಶಾಸ್ತ್ರದ 4ನೇ ಸೆಮಿಸ್ಟರ್‌ನ Business Applications of Operation Research ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ: 5, 6, 7 ಮತ್ತು 8ರ ಪ್ರಶ್ನೆಗಳಿಗೆ ಪರಿಕ್ಷಾರ್ಥಿಗಳು ಉತ್ತರಿಸಿದಲ್ಲಿ ಪ್ರತಿ ಪ್ರಶ್ನೆಗೆ ಶೇಕಡ 50% ಅಥವಾ ಕನಿಷ್ಠ 07 ಅಂಕಗಳ ನೆರವೇರಿಕೆ (Minimum Performance) ಯಿಂದ ಪ್ರಾರಂಭಿಸಿ ಮೌಲ್ಯಮಾಪನ ನಡೆಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.08(f)/(10/24) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಅಂಕಪಟ್ಟಿಗಳನ್ನು ಮುದ್ರಿಸಲು ಪ್ರಿಂಟರ್ ಯಂತ್ರ ಖರೀದಿಸಲಾದ ಬಾಬ್ತುಗೆ ಸಂಬಂಧಿಸಿದ ಉಪ ಸಮಿತಿ ಸಭಾ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.

*******

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗಳಿಗೆ ಬೇಕಾಗಿರುವ ಅಂಕಪಟ್ಟಿಗಳನ್ನು ಮುದ್ರಿಸಲು ಅವಶ್ಯವಿರುವ Konica Minolta BH C36li (Color) MFD Printer ಯಂತ್ರವನ್ನು ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ M/s Glaxy Imaging Technologies, Bangalore-560008 ಇವರಿಂದ ಖರೀದಿಸಲಾಗಿದೆ. ಸದರಿ ಸಂಸ್ಥೆಯವರು ರೂ.4,96,780/– (ರೂಪಾಯಿ ನಾಲ್ಕು ಲಕ್ಷದ ತೊಂಭತ್ತಾರು ಸಾವಿರದ ಏಳುನೂರ ಎಂಭತ್ತು ಮಾತ್ರ) ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಸದರಿ ಬಿಲ್ಲುಗಳನ್ನು ದಿನಾಂಕ:03.10.2024ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ರೂ.4,96,780/– ಗಳ ಪಾವತಿಗೆ ಸಂಬಂಧಿಸಿದಂತೆ ಸಭೆಯು ಅನುಮೋದಿಸಿ ಮುಂದಿನ ಕ್ರಮವಹಿಸುವಂತೆ ಅನುಮೋದನೆ ನೀಡಿತು.

ಈ ಹಿನ್ನೆಲೆಯಲ್ಲಿ ಉಪ ಸಮಿತಿ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s Glaxy Imaging Technologies, Bangalore-560008 ಇವರಿಗೆ ರೂ.4,96,780/–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:03.10.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ ರೂ.ಗಳಲ್ಲಿ |
|---|---|---|---|
| 01 | M/s Glaxy Imaging Technologies, Bangalore-560008 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಅಂಕಪಟ್ಟಿಗಳನ್ನು ಮುದ್ರಿಸಲು ಪ್ರಿಂಟರ್ ಯಂತ್ರ ಖರೀದಿಸಲಾದ ಬಾಬ್ತು. | 4,96,780–00 |
| | (ರೂಪಾಯಿ ನಾಲ್ಕು ಲಕ್ಷದ ತೊಂಭತ್ತಾರು ಸಾವಿರದ ಏಳುನೂರ ಎಂಭತ್ತು ಮಾತ್ರ) | ಒಟ್ಟು | **4,96,780–00** |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಅಂಕಪಟ್ಟಿಗಳನ್ನು ಮುದ್ರಿಸಲು ದರಪಟ್ಟಿ ಆಹ್ವಾನಿಸಿ Konica Minolta BH C36li (Color) MFD Printer - ಖರೀದಿಸಿದ ಬಾಬ್ತು ರೂ.4,96,780/– ಗಳ ಬಿಲ್ಲುಗಳನ್ನು ದಿನಾಂಕ:03.10.2024ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು ರೂ.4,96,780/– ಗಳನ್ನು M/s Glaxy Imaging Technologies, Bangalore-560008 ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(a)/(10/24) |

## –:ಟಿಪ್ಪಣಿ:–

ವಿಷಯ: **Construction of Toilet Blocks for MCA Department in Second Floor of Science Block Building in Shivagangotri, Campus at Davangere University Davangere.**

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಹೊಸ ವಿಜ್ಞಾನ ಕಟ್ಟಡದ ಎರಡನೇ ಅಂತಸ್ತಿನಲ್ಲಿ MCA ವಿಭಾಗಕ್ಕೆ ಪ್ರಸ್ತುತ ತರಗತಿ ಕೊಠಡಿಗಳನ್ನು ಮಾತ್ರ ನಿರ್ಮಾಣ ಮಾಡಲಾಗುತ್ತಿದೆ. ಆದರೆ MCA ವಿಭಾಗದ ಅಧ್ಯಕ್ಷರು AICTE ಅವರು ತಪಾಸಣೆ ಬರುವ ಸಾಧ್ಯತೆ ಇರುವುದರಿಂದ ಶೌಚಾಲಯಗಳನ್ನು ನಿರ್ಮಿಸಿಕೊಡುವಂತೆ ಕೋರಿದ್ದು, ಶೌಚಾಲಯಗಳು ಕಾಮಗಾರಿಯನ್ನು KRIDL/ ನಿರ್ಮಿತಿ ಕೇಂದ್ರ, ದಾವಣಗೆರೆ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ (ಅಂದಾಜು ಮೊತ್ತ: 10.00 ಲಕ್ಷ) ಕೈಗೊಳ್ಳಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ MCA ಅಧ್ಯಯನ ವಿಭಾಗದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡದಲ್ಲಿ ವಿದ್ಯಾರ್ಥಿಗಳು/ ಸಿಬ್ಬಂದಿಗಳಿಗೆ ಅವಶ್ಯವಿರುವ ಶೌಚಾಲಯಗಳನ್ನು ನಿರ್ಮಿಸುವ ಕಾಮಗಾರಿಯನ್ನು KRIDL/ ನಿರ್ಮಿತಿ ಕೇಂದ್ರ, ದಾವಣಗೆರೆ ಇವರಿಂದ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ (ಅಂದಾಜು ಮೊತ್ತ: 10.00 ಲಕ್ಷ) ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(b)/(10/24) |

## –:ಟಿಪ್ಪಣಿ:–

ವಿಷಯ: **ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "PM- KUSUM" ಅಡಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸರ್ವೆ ನಂ. 55 ರಲ್ಲಿನ ಹಾಲುವರ್ತಿ ಗ್ರಾಮದಲ್ಲಿರುವ 61 ಎಕರೆ ಜಾಗದಲ್ಲಿ 55 ಎಕರೆ ಜಾಗವನ್ನು BESCOM ನಿಂದ ನೊಂದಾಯಿತ ಸಂಸ್ಥೆಗೆ Solar Panel ಗಳನ್ನು ಅಳವಡಿಸಲು ನೀಡುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುವ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "PM- KUSUM" ಅಡಿಯಲ್ಲಿ ಆನಗೋಡು ವ್ಯಾಪ್ತಿಯಲ್ಲಿ 12mw ಸೋಲಾರ ಉತ್ಪಾದನೆಗೆ M\s Palavi Green Power Lvt Ltd., ತಮಿಳುನಾಡು. ಇವರಿಗೆ BESCOM ನಿಂದ ಆದೇಶ ನೀಡಿದ್ದು ಇವರಿಗೆ ಸರ್ಕಾರ ನಿಗದಿಪಡಿಸಿದ ದರದಂತೆ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸರ್ವೆ ನಂ. 55 ರಲ್ಲಿನ ಹಾಲುವರ್ತಿ ಗ್ರಾಮದಲ್ಲಿರುವ 61 ಎಕರೆ ಜಾಗದಲ್ಲಿ 55 ಎಕರೆ ಜಾಗವನ್ನು ನೀಡುವಂತೆ ಕೋರಿ ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಕುರಿತಾಗಿ ಸರ್ಕಾರಕ್ಕೆ ಪತ್ರ ಬರೆಯಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "PM- KUSUM" ಅಡಿಯಲ್ಲಿ ಆನಗೋಡು ವ್ಯಾಪ್ತಿಯಲ್ಲಿ 12mw ಸೋಲಾರ್ ಉತ್ಪಾದನೆಗೆ M\s Palavi Green Power Lvt Ltd., ತಮಿಳುನಾಡು ಇವರಿಗೆ BESCOM ನಿಂದ ಆದೇಶ ನೀಡಿದ್ದು, ಇವರಿಗೆ ಸರ್ಕಾರ ನಿಗದಿಪಡಿಸಿದ ದರದಂತೆ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸರ್ವೆ ನಂ. 55 ರಲ್ಲಿನ ಹಾಲುವರ್ತಿ ಗ್ರಾಮದಲ್ಲಿರುವ 61 ಎಕರೆ ಜಾಗದಲ್ಲಿ 55 ಎಕರೆ ಜಾಗವನ್ನು ನೀಡುವ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(c)/(10/24) |

## -:ಟಿಪ್ಪಣಿ:-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯ ಕಲಾ ಮಹಾವಿದ್ಯಾನಿಲಯದ ಆವರಣಕ್ಕೆ 100MBPS Network ಅಳವಡಿಸುವ ಕುರಿತು.**

*******

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾನಿಲಯದ ಆವರಣದಲ್ಲಿ Internet ಇರುವುದಿಲ್ಲ ಇದರಿಂದಾಗಿ 100 MBPS ಸಾಮರ್ಥ್ಯದ Network ಅಳವಡಿಸಲು BSNL ನಿಂದ ರೂ. 6,80,000/- ಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದ್ದರಿಂದ, ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷದ ಒಳಗೆ ಅಳವಡಿಸಲು ಈ ಕಾಮಗಾರಿಯನ್ನು ಕೈಗೊಂಡಿದ್ದು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾನಿಲಯದ ಆವರಣದಲ್ಲಿ ರೂ.5.00 ಲಕ್ಷದೊಳಗೆ 100 MBPS ಸಾಮರ್ಥ್ಯದ Network ಅಳವಡಿಸಲು ದರಪಟ್ಟಿ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(d)/(10/24) |

## -:ಟಿಪ್ಪಣಿ:-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಆಹಾರ ತಂತ್ರಜ್ಞಾನ ವಿಭಾಗದ ಪ್ರಯೋಗಾಲಯಗಳಿಗೆ ಕೆಮಿಕಲ್ & ಗ್ಲಾಸ್‌ವೇರ್ಸ್‌ಗಳನ್ನು ಇಡಲು Storage Partition & ಶೆಲ್ಫ್ ಗಳನ್ನು ಮಾಡಿಸುವ ಕುರಿತು.**

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಆಹಾರ ತಂತ್ರಜ್ಞಾನ ವಿಭಾಗದ ಪ್ರಯೋಗಾಲಯಗಳಿಗೆ ಕೆಮಿಕಲ್ & ಗ್ಲಾಸವೇರ್ಸ್‌ಗಳನ್ನು ನೆಲದ ಮೇಲೆಯೆ ಇರಿಸಲಾಗುತ್ತಿದೆ ಕೆಮಿಕಲ್‌ಗಳು ಹಾನಿಕಾರಕವಾಗಿರುವದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ ಆದ್ದರಿಂದ ಕೆಮಿಕಲ್ & ಗಾಸ್‌ವೇರ್ಸ್‌ಗಳನ್ನು ಇರಿಸಲು Storage Partition & ಶೆಲ್ಫ್‌ಗಳನ್ನು ಮಾಡಿಸಿಕೊಡುವಂತೆ ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ. ಆದ್ದರಿಂದ, ಕೆಮಿಕಲ್ & ಗ್ಲಾಸವೇರ್ಸ್‌ಗಳಿಗೆ ಹೊಸದಾಗಿ Storage Partition & ಶೆಲ್ಫ್‌ಗಳನ್ನು ಮಾಡುವ ಅವಶ್ಯಕತೆ ಇದ್ದು ಇದನ್ನು (ಅಂದಾಜು ಮೊತ್ತ: 3.50 ಲಕ್ಷ) ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಹಾರ ತಂತ್ರಜ್ಞಾನ ವಿಭಾಗದ ಪ್ರಯೋಗಾಲಯಗಳಿಗೆ ಕೆಮಿಕಲ್ & ಗ್ಲಾಸವೇರ್ಸ್‌ಗಳನ್ನು ಇರಿಸಲು Storage Partition & ಶೆಲ್ಫ್‌ಗಳನ್ನು (ಅಂದಾಜು ಮೊತ್ತ: 3.50 ಲಕ್ಷದೊಳಗೆ) ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(e)/(10/24) |

## –:ಟಿಪ್ಪಣಿ:–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕಟ್ಟಡದಲ್ಲಿರುವ **Auditorium** ಗೆ **False Ceiling** ಮಾಡಿಸುವ ಕುರಿತು.

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ & ಸಮಾಜ ವಿಜ್ಞಾನ ಕಟ್ಟಡದಲ್ಲಿರುವ Auditorium ಗಳಿಗೆ False Ceiling ಮಾಡಿಸುವ ಅವಶ್ಯಕತೆ ಇದ್ದು ಎರಡು Auditorium ಗಳ ಅಂದಾಜು ಅಳತೆ 600 ಚದರ ಮೀ. ಇದ್ದು E-Tender ಮುಖಾಂತರ ಕೈಗೊಳ್ಳಲು (ಅಂದಾಜು ಮೊತ್ತ: 15.00 ಲಕ್ಷಗಳು) ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ & ಸಮಾಜ ವಿಜ್ಞಾನ ಕಟ್ಟಡದಲ್ಲಿರುವ Auditorium ಗಳಿಗೆ False Ceiling ಮಾಡಿಸಲು E-Tender ಮುಖಾಂತರ (ಅಂದಾಜು ಮೊತ್ತ: 15.00 ಲಕ್ಷದೊಳಗೆ) ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು. .

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(f)/(10/24) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಗ್ರಂಥಾಲಯದ ನೆಲಮಹಡಿ ಮತ್ತು ಮೊದಲನೇ ಮಹಡಿಗೆ 5 KVA ಸಾಮರ್ಥ್ಯದ UPS Battery ಗಳನ್ನು ಖರೀದಿಸುವ ಕುರಿತು.**

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಗ್ರಂಥಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ರಾತ್ರಿಯವರೆಗೆ ಅಭ್ಯಾಸ ಮಾಡುವುದರಿಂದ 5 KVA ಸಾಮರ್ಥ್ಯದ UPS Battery ಗಳನ್ನು ನೆಲಮಹಡಿ ಮತ್ತು ಮೊದಲನೇ ಮಹಡಿಗೆ ಅಳವಡಿಸುವಂತೆ ಗ್ರಂಥಪಾಲಕರು ಕೋರಿರುತ್ತಾರೆ. ಆದ್ದರಿಂದ ಗ್ರಂಥಾಲಯದಲ್ಲಿ ನೆಲಮಹಡಿ ಮತ್ತು ಮೊದಲನೇ ಮಹಡಿಗೆ ಹೊಸದಾಗಿ 5 KVA ಸಾಮರ್ಥ್ಯದ UPS Battery ಗಳನ್ನು ಖರೀದಿಸುವ ಅಳವಡಿಸುವ ಅವಶ್ಯಕತೆ ಇದ್ದು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ (ಅಂದಾಜು ಮೊತ್ತ:5.00 ಲಕ್ಷ) ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಗ್ರಂಥಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ತಡರಾತ್ರಿಯವರೆಗೆ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಗ್ರಂಥಾಲಯದ ನೆಲಮಹಡಿ ಮತ್ತು ಮೊದಲನೇ ಮಹಡಿಗೆ ಹೊಸದಾಗಿ 5 KVA ಸಾಮರ್ಥ್ಯದ UPS Battery ಗಳನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ (ಅಂದಾಜು ಮೊತ್ತ: 5.00 ಲಕ್ಷದೊಳಗೆ) ಹಣಕಾಸು ಲಭ್ಯತೆ ನೋಡಿಕೊಂಡು ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(g)/(10/24) |

## –:ಟಿಪ್ಪಣಿ:–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ MBA Auditorium ನಲ್ಲಿರುವ Wooden Chairs ಗಳನ್ನು S.S. Auditorium ಗೆ ಸ್ಥಳಾಂತರಿಸುವ ಕುರಿತು.**

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ MBA Auditorium ಗೆ ಹೊಸದಾಗಿ ಕುಶನ್ Chair ಗಳನ್ನು E-Tender ಮುಖಾಂತರ ಖರೀಧಿಸಲಾಗಿದ್ದು ಈಗ ಅಲ್ಲಿರುವ ಹಳೆಯ Wooden Chair ಗಳನ್ನು S.S. ಕಟ್ಟಡದ Auditorium ನಲ್ಲಿ Chairs ಗಳು ಇರುವುದಿಲ್ಲ ಆದ್ದರಿಂದ MBA Auditorium ನಲ್ಲಿರುವ Wooden Chairs ಗಳನ್ನು S.S.Auditorium ಗೆ ಸಣ್ಣಪುಟ್ಟ Fabrications ಕೆಲಸಗಳ ಸಹಿತ ಸ್ಥಳಾಂತರಿಸುವ ಅವಶ್ಯಕತೆ ಇದ್ದು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ MBA Auditorium ಗೆ ಹೊಸದಾಗಿ ಕುಶನ್ Chair ಗಳನ್ನು E-Tender ಮುಖಾಂತರ ಖರೀದಿಸಿರುವುದರಿಂದ MBA Auditorium ನಲ್ಲಿರುವ ಹಳೆಯ Wooden Chair ಗಳನ್ನು S.S.Auditorium ಗೆ ಸಣ್ಣಪುಟ್ಟ Fabrications ಕೆಲಸಗಳೊಂದಿಗೆ ಸ್ಥಳಾಂತರಿಸಲು ಕಾಮಗಾರಿಯನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(h)/(10/24) |

## –:ಟಿಪ್ಪಣಿ:–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ MCA ಅಧ್ಯಯನ ವಿಭಾಗಕ್ಕೆ Stair case ನಿಂದ ಕಾರಿಡಾರ್‌ಗೆ Trusses ನಿರ್ಮಾಣ ಮಾಡುವ ಕುರಿತು.**

*******

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ ಕಟ್ಟಡದಲ್ಲಿರುವ ಎರಡನೇ ಅಂತಸ್ತಿನಲ್ಲಿ ನಿರ್ಮಾಣ ಮಾಡುತ್ತಿರುವ MCA ಅಧ್ಯಯನ ವಿಭಾಗಕ್ಕೆ Stair case ನಿಂದ ಕಾರಿಡಾರ್‌ಗೆ Trusses ನಿರ್ಮಾಣ ಮಾಡುವ ಅವಶ್ಯಕತೆ ಇದ್ದು, ಈ ಕಾಮಗಾರಿಯನ್ನು (ಅಂದಾಜು ಮೊತ್ತ: ರೂ. 5.00 ಲಕ್ಷ.) ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:03.10.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ MCA ಅಧ್ಯಯನ ವಿಭಾಗಕ್ಕೆ Stair case ನಿಂದ ಕಾರಿಡಾರ್‌ಗೆ Trusses ನಿರ್ಮಾಣ ಮಾಡುವ ಕಾಮಗಾರಿಯನ್ನು KRIDL/ ನಿರ್ಮಿತಿ ಕೇಂದ್ರ, ದಾವಣಗೆರೆ ಇವರ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

## “ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು”

| ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು. | | |
|---|---|---|
| ಪ್ರಾಧಿಕಾರ ವಿಭಾಗ | ವಿಷಯ : | ಈಗಾಗಲೇ ಪ್ರಸ್ತಾವನೆಯ ಮೂಲಕ ಪ್ರಸಾರಾಂಗದ ಅಗತ್ಯತೆಯ ಬಗ್ಗೆ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದಿದ್ದು, ಪ್ರಸಾರಂಗವು ವಿಶ್ವವಿದ್ಯಾನಿಲಯದ ಪ್ರಮುಖ ಭಾಗವಾಗಿದ್ದು, ಸಂಶೋಧನಾ ವಿದ್ಯಾರ್ಥಿಗಳ ಅನುಕೂಲತೆಯ ಹಿತದೃಷ್ಠಿಯಿಂದ ಅದನ್ನು ತರ್ತಾಗಿ ಕ್ರಿಯಾಶೀಲಗೊಳಿಸುವುದು. |
| | ನಿರ್ಣಯ : | ವಿಶ್ವವಿದ್ಯಾನಿಲಯವು ಪ್ರಸಾರಾಂಗವನ್ನು ಈಗಾಗಲೇ ಕ್ರಿಯಾಶೀಲಗೊಳಿಲಾಗಿದೆ. ಪ್ರಸಾರಾಂಗವನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕಟ್ಟಡಗಳಲ್ಲಿ ಸ್ಥಳ ಪರಿಶೀಲಿಸಿ ಒಂದು ಕಟ್ಟಡವನ್ನು ಆಯ್ಕೆ ಮಾಡಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು. |

| | | |
|---|---|---|
| ಹಣಕಾಸು ವಿಭಾಗ | ವಿಷಯ : | ಕು. ಕೊಟ್ರಮ್ಮ ಕೆ., ಇವರು – ಎಂ.ಕಾಂ. ಪದವಿಧರರಾಗಿರುತ್ತಾರೆ. ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ದಿನಾಂಕ:01.03.2012 ರಿಂದ ಸುಮಾರು 12 ವರ್ಷ 6 ತಿಂಗಳುಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಅನುಭವವುಳ್ಳವರಾಗಿದ್ದಾರೆ ಹಾಗೂ ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ಲೆಕ್ಕ ಪತ್ರ ತಯಾರಿ, ಆಯವ್ಯಯ ತಯಾರಿ ಹಾಗೂ ತ್ರೈಮಾಸಿಕ ಖರ್ಚು ವೆಚ್ಚಗಳ ನಿರ್ವಹಣೆಯನ್ನು ಬಹಳ ಶ್ರದ್ಧೆಯಿಂದ ನಿರ್ವಹಿಸುತ್ತಾರೆ. ಅತೀ ತುರ್ತು ಸಮಯದಲ್ಲಿ / ರಜಾ ದಿನಗಳಲ್ಲಿ ಖಾಯಂ ಸಿಬ್ಬಂದಿಗಳ ವೇತನ ತಯಾರಿಸುವುದು, ಹಣಕಾಸು ಸಮಿತಿ ಮತ್ತು ಆಡಿಟ್ ಇನ್ನಿತರೆ ಸಮಯದಲ್ಲಿ ಕಛೇರಿ ಸಮಯವನ್ನು ಹೊರತುಪಡಿಸಿ ಬೆಳಗ್ಗೆ ಮತ್ತು ಸಂಜೆ ಸಮಯ ಮೀರಿ ಹೆಚ್ಚುವರಿ ಕೆಲಸ ನಿರ್ವಹಣೆ ಮಾಡುತ್ತಿರುವುದರಿಂದ ಸದರಿಯವರಿಗೆ ಮಾಸಿಕ ವೇತನವನ್ನು ಪರಿಷ್ಕರಿಸುವ ಕುರಿತು. |
| | ನಿರ್ಣಯ : | ಕು. ಕೊಟ್ರಮ್ಮ ಕೆ., ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ಹಣಕಾಸು ವಿಭಾಗ – ಇವರಿಗೆ ಮಾಸಿಕ ವೇತನದೊಂದಿಗೆ ರೂ.5000/– ಗಳನ್ನು ಹೆಚ್ಚುವರಿಯಾಗಿ ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು. |

ಕೊನೆಯಲ್ಲಿ ಕುಲಸಚಿವರು(ಆಡಳಿತ) ಪ್ರಭಾರೆ ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಕುಲಪತಿಗಳು